ಅಧ್ಯಾಯ ೧೧

# ಇತರ ಇಲಾಖೆಗಳು

ಆಡಳಿತಾರೂಢ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕಾಲಕಾಲಕ್ಕೆ ಹಲವು ಅಭಿವೃದ್ಧಿ ಯೋಜನೆಗಳನ್ನು ಹಮ್ಮಿಕೊಳ್ಳುತ್ತಿರುತ್ತವೆ. ಈ ಯೋಜನೆಗಳನ್ನು ಸಂಬಂಧಿಸಿದ ಇಲಾಖೆ, ಮಂಡಲಿ, ನಿಗಮ ಮೊದಲಾದವುಗಳ ಮೂಲಕ ಕಾರ್ಯರೂಪಕ್ಕೆ ತರಲಾಗುತ್ತದೆ. ಈ ಗ್ಯಾಸೆಟಿಯರ್‌ನ ಇತರ ಕೆಲವು ಅಧ್ಯಾಯಗಳಲ್ಲಿ ಅಂತಹ ಕೆಲವೊಂದು ಇಲಾಖೆಗಳ ಕಾರ್ಯಚಟುವಟಿಕೆಗಳ ಬಗೆಗೆ ಪ್ರಸ್ತಾಪಿಸಲಾಗಿದೆ. ಆದರೆ, ಪ್ರಸ್ತುತ ಅಧ್ಯಾಯದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ವಿವಿಧ ಇಲಾಖೆಗಳು, ಮಂಡಲಿ ಹಾಗೂ ನಿಗಮಗಳ ಸ್ಥಾಪನೆ, ಕಚೇರಿಯ ಸಿಬ್ಬಂದಿ ಸ್ವರೂಪ, ಆಡಳಿತ ವ್ಯಾಪ್ತಿ, ಅವುಗಳ ಧ್ಯೇಯೋದ್ದೇಶಗಳು–ಇತ್ಯಾದಿಗಳ ಬಗೆಗೆ ಆಯಾ ಕಚೇರಿಗಳು ಒದಗಿಸಿದ ಮಾಹಿತಿ ಆಧರಿಸಿ ಸಂಕ್ಷಿಪ್ತ ಪರಿಚಯ ಮಾಡಿಕೊಡಲಾಗಿದೆ. ಅಧಿಕಾರಿಗಳು, ಅಧ್ಯಯನಕಾರರು ಹಾಗೂ ಆಸಕ್ತ ಸಾರ್ವಜನಿಕರು ಜಿಲ್ಲೆಯಲ್ಲಿನ ಆಡಳಿತಯಂತ್ರದ ಬಗೆಗೆ ಸ್ಥೂಲ ಪರಿಚಯ ಮಾಡಿಕೊಳ್ಳಲು ಇಲ್ಲಿನ ಮಾಹಿತಿಗಳು ನೆರವಾಗುತ್ತವೆ. ಸರಕಾರದ ಇಲಾಖಾ ಕಚೇರಿಗಳು ಸಾಮಾನ್ಯವಾಗಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ಒಂದೇ ರೀತಿ ಇರುವುದು ಸಹಜ. ಆದಾಗ್ಯೂ, ಪ್ರಾದೇಶಿಕ ಅಗತ್ಯ ಮತ್ತಿತರ ಉದ್ದೇಶಗಳಿಂದ ಕೆಲವೊಂದು ಇಲಾಖಾ ಕಚೇರಿಗಳು ಕೆಲವು ಜಿಲ್ಲೆಗಳಲ್ಲಿ ಮಾತ್ರ ಕಾರ್ಯನಿರ್ವಹಿಸುತ್ತವೆ ಆದ್ದರಿಂದ, ಈ ಅಧ್ಯಾಯದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಂತಹ ಕೆಲವು ಕಚೇರಿಗಳ ಬಗೆಗೂ ಸಾಧ್ಯವಾದಷ್ಟು ಮಾಹಿತಿ ಸಂಗ್ರಹಿಸಿ ಕೊಡುವ ಪ್ರಯತ್ನ ಮಾಡಲಾಗಿದೆ.

## ಅರಣ್ಯ ಇಲಾಖೆ

ದಕ್ಷಿಣ ಕನ್ನಡ ಅರಣ್ಯ ವಿಭಾಗವು ೧೮೮೮ರಷ್ಟು ಹಿಂದೆಯೇ ಪ್ರಾರಂಭವಾಗಿದ್ದಿತು. ಆದರೆ ೧೯೦೨ರಿಂದ ಅದು ತನ್ನ ಕ್ರಿಯಾ ಯೋಜನೆಯಂತೆ ವಿಭಾಗದ ಅರಣ್ಯಗಳ ವ್ಯವಸ್ಥಿತ ನಿರ್ವಹಣೆ ಪ್ರಾರಂಭಿಸಿತು. ೧೯೧೬ರಲ್ಲಿ ಈ ವಿಭಾಗವನ್ನು ಪುತ್ತೂರು ಮತ್ತು ಕುಂದಾಪುರ ಅರಣ್ಯ ವಿಭಾಗಗಳನ್ನಾಗಿ ವಿಭಜಿಸಲಾಯಿತು. ಬಳಿಕ ದಕ್ಷಿಣ ಮತ್ತು ಉತ್ತರ ಮಂಗಳೂರು ವಿಭಾಗಗಳೆಂದು ಅವುಗಳನ್ನು ಹೆಸರಿಸಲಾಯಿತು. ಆದರೆ, ೧೯೩೮ರ ಎರಡನೇ ಜಾಗತಿಕ ಯುದ್ಧದ ಪರಿಣಾಮವಾಗಿ ಆರ್ಥಿಕ ನಿಯಂತ್ರಣಕ್ಕಾಗಿ ಎರಡೂ ವಿಭಾಗಗಳನ್ನು ಮತ್ತೆ ಒಗ್ಗೂಡಿಸಲಾಯಿತು. ೧೯೬೬ರಲ್ಲಿ ಮತ್ತೆ ದಕ್ಷಿಣ ಮತ್ತು ಉತ್ತರ ಮಂಗಳೂರು ವಿಭಾಗಗಳೆಂದು ವಿಭಾಗಿಸಲಾಯಿತು. ಮಂಗಳೂರು

ಮತ್ತು ಕುಂದಾಪುರಗಳಲ್ಲಿ ಅವುಗಳ ಕೇಂದ್ರ ಕಚೇರಿಗಳು ಇದ್ದವು. ೧೯೯೭–೯೮ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಿಂದ ಉಡುಪಿಯನ್ನು ಪ್ರತ್ಯೇಕ ಜಿಲ್ಲೆಯಾಗಿಸಿದ ಮೇಲೆ ಕುಂದಾಪುರ ಅರಣ್ಯ ವಿಭಾಗವನ್ನು ಉಡುಪಿ ಅರಣ್ಯ ವಿಭಾಗವೆಂದು ಬದಲಿಸಲಾಯಿತು. ೧೯೬೮ರಲ್ಲಿ ಮಂಗಳೂರು ಅರಣ್ಯ ವಿಭಾಗವನ್ನು ಪ್ರತ್ಯೇಕವಾಗಿ ರಚಿಸಿದಾಗ ಅದಾಗಲೇ ಅಸ್ತಿತ್ವದಲ್ಲಿದ್ದ ಮಂಗಳೂರು, ಪುತ್ತೂರು, ಉಪ್ಪಿನಂಗಡಿ ಮತ್ತು ಸುಳ್ಯ ವಲಯಗಳೊಂದಿಗೆ ಸುಬ್ರಹ್ಮಣ್ಯ ಮತ್ತು ಪಂಜ ಎಂಬ ಎರಡು ಹೆಚ್ಚಿನ ವಲಯಗಳನ್ನು ರಚಿಸಲಾಯಿತು. ೧೯೭೪ರಲ್ಲಿ ಬೆಳ್ತಂಗಡಿ ವಲಯವನ್ನು ಕುಂದಾಪುರ ವಿಭಾಗದಿಂದ ಮಂಗಳೂರು ವಿಭಾಗಕ್ಕೆ ವರ್ಗಾಯಿಸಲಾಯಿತು. ೧೯೮೮ರಲ್ಲಿ ಬಂಟ್ವಾಳ ವಲಯವನ್ನು ರಚಿಸಲಾಯಿತು. ಹೀಗಾಗಿ, ಪ್ರಸ್ತುತ ಮಂಗಳೂರು ಅರಣ್ಯ ವಿಭಾಗವು ಎಂಟು ಅರಣ್ಯ ವಲಯಗಳನ್ನು ಹೊಂದಿದೆ. ಉಪ ಅರಣ್ಯ ಸಂರಕ್ಷಣಾಧಿಕಾರಿ ಅವರು ಮಂಗಳೂರಿನಲ್ಲಿನ ಈ ವಿಭಾಗ ಕಚೇರಿಯ ಮುಖ್ಯಸ್ಥರಾಗಿದ್ದಾರೆ. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ವಲಯ ಅರಣ್ಯಾಧಿಕಾರಿ, ಪತ್ರಾಂಕಿತ ವ್ಯವಸ್ಥಾಪಕ, ವನಪಾಲಕ, ಅರಣ್ಯಪಾಲಕರು ಮೊದಲಾದ ಇತರ ಅಧಿಕಾರಿ, ಸಿಬ್ಬಂದಿ ಅವರೊಂದಿಗೆ ಕಾರ್ಯನಿರ್ವಹಿಸುತ್ತಿದ್ದಾರೆ. ಮಂಗಳೂರು ವೃತ್ತದ ಅಧೀನಕ್ಕೊಳಪಟ್ಟಿರುವ ಮಂಗಳೂರು ವಿಭಾಗದ ವ್ಯಾಪ್ತಿಯಲ್ಲಿ ಮಂಗಳೂರು ಉಪವಿಭಾಗ (ಮಂಗಳೂರು ವಲಯ, ಬಂಟ್ವಾಳ ವಲಯ ಹಾಗೂ ಬೆಳ್ತಂಗಡಿ ವಲಯಗಳ ವ್ಯಾಪ್ತಿ), ಪುತ್ತೂರು ಉಪ ವಿಭಾಗ (ಉಪ್ಪಿನಂಗಡಿ ವಲಯ, ಪುತ್ತೂರು ವಲಯ ಮತ್ತು ಮಣ್ಣಗುಂಡಿ ಕೇಂದ್ರೀಯ ಮರಮಟ್ಟುಗಳ ಸಂಗ್ರಹಾಲಯ), ಸುಬ್ರಹ್ಮಣ್ಯ ಉಪವಿಭಾಗ (ಸುಬ್ರಹ್ಮಣ್ಯ, ಸುಳ್ಯ ಮತ್ತು ಪಂಜ ವಲಯಗಳು ಹಾಗೂ ನೆಟ್ಟಣ ಮತ್ತು ಸುಳ್ಯ ಕೇಂದ್ರೀಯ ಮರಮಟ್ಟುಗಳ ಸಂಗ್ರಹಾಲಯಗಳ ವ್ಯಾಪ್ತಿ) ಗಳಿದ್ದು, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಆಯಾ ಉಪವಿಭಾಗದ ಮುಖ್ಯಸ್ಥರಾಗಿ ಹಾಗೂ ವಲಯ ಅರಣ್ಯಾಧಿಕಾರಿ ಅವರು ಆಯಾ ವಲಯ ಕಛೇರಿಯ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸುತ್ತಾರೆ.

ಅರಣ್ಯ ಉತ್ಪನ್ನಗಳ ಸಾಗಾಣಿಕೆಯ ನಿಯಂತ್ರಣ, ವನ್ಯಪ್ರಾಣಿ ಸಂರಕ್ಷಣೆ, ಅರಣ್ಯಭೂಮಿಯಲ್ಲಿ ಅರಣ್ಯೇತರ ಚಟುವಟಿಕೆಗಳ ನಿರ್ಬಂಧ ಮೊದಲಾದವುಗಳ ಮೂಲಕ ಅರಣ್ಯಗಳ ವೈಜ್ಞಾನಿಕ ನಿರ್ವಹಣೆ ಮಾಡುವ ಧ್ಯೇಯೋದ್ದೇಶ ಹೊಂದಿರುವ ಈ ಇಲಾಖೆಯು ಅರಣ್ಯ ಭೂಮಿ ಸಾರ ಸಂರಕ್ಷಣೆ, ನಶಿಸಿಹೋದ ಅರಣ್ಯ ಭಾಗದಲ್ಲಿ ನೆಡು ತೋಪು ಬೆಳೆಸುವುದು, ಬೆಂಕಿಯಿಂದ ಅರಣ್ಯ ರಕ್ಷಣೆ, ಕೋಸ್ಟಲ್ ಶೆಲ್ಟರ್ ಬೆಲ್ಟ್ ಸ್ಕೀಮ್, ನಗರ ಹಸುರೀಕರಣ ಯೋಜನೆ ಮೊದಲಾದ ವಿವಿಧ ಯೋಜನೆ ಹಾಗೂ ಅಭಿವೃದ್ಧಿ ಚಟುವಟಿಕೆಗಳನ್ನು ನಡೆಸುತ್ತಿದೆ. ಈ ಕಛೇರಿಯು ೧೯೬೩ನೇ ಕರ್ನಾಟಕ ಅರಣ್ಯ ಕಾಯ್ದೆ, ೧೯೭೨ನೇ ಕರ್ನಾಟಕ ವನ್ಯ ಪ್ರಾಣಿ ಸಂರಕ್ಷಣಾ ಕಾಯ್ದೆ, ಕರ್ನಾಟಕ ಅರಣ್ಯ ಲೆಕ್ಕಸಂಹಿತೆ ಮೊದಲಾದ ನಿಯಮ, ಅಧಿನಿಯಮಗಳನ್ನು ತನ್ನ ಕಾರ್ಯನಿರ್ವಹಣೆಯಲ್ಲಿ ಅಳವಡಿಸಿಕೊಳ್ಳುತ್ತದೆ. ಅರಣ್ಯ ಸಂರಕ್ಷಣಾಧಿಕಾರಿ, ಮಂಗಳೂರು ಅವರು ಮೇಲಧಿಕಾರಿಯಾಗಿರುತ್ತಾರೆ.

## ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ

ರಾಜ್ಯ ಹಾಗೂ ಕೇಂದ್ರ ಸರಕಾರಗಳ ವಿವಿಧ ಯೋಜನೆಗಳಿಗೆ ಅಗತ್ಯವಾದ ಸಮೀಕ್ಷೆಗಳನ್ನು ನಡೆಸಿ, ಅಂಕಿ–ಅಂಶಗಳನ್ನು ಸಂಗ್ರಹಿಸಿ ಪ್ರಕಟಿಸುವ ಧ್ಯೇಯೋದ್ದೇಶದಿಂದ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ ಅವರ ಕಚೇರಿಯು ಮಂಗಳೂರಿನಲ್ಲಿ ೧೯೫೯ರಿಂದ ಕಾರ್ಯನಿರ್ವಹಿಸುತ್ತಿದೆ. ಜಿಲ್ಲಾ ವ್ಯಾಪ್ತಿ ಅಧಿಕಾರ ಹೊಂದಿದ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಯು ಈ ಕಚೇರಿಯ ಮುಖ್ಯಸ್ಥರಾಗಿದ್ದು ಸಹಾಯಕ ನಿರ್ದೇಶಕ, ಅಧೀಕ್ಷಕ, ಸಹಾಯಕ ಸಾಂಖ್ಯಿಕ ಅಧಿಕಾರಿ ಮೊದಲಾದ ಅಧಿಕಾರಿ, ಸಿಬ್ಬಂದಿ ಇವರ ನೆರವಿಗೆ ಇರುತ್ತಾರೆ. ರಾಷ್ಟ್ರೀಯ ಮಾದರಿ ಸಮೀಕ್ಷೆ, ಬೆಲೆ ವರದಿ ತಯಾರಿ ಹಾಗೂ ಮೇಲ್ವಿಚಾರಣೆ, ಸುಗ್ಗಿ ಕಾಲದ ಧಾರಣೆ ವರದಿ, ಜನನ ಮರಣ ನೋಂದಣಿ–ವಿಶೇಷ ಮಾಸಿಕ ವರದಿ, ಲಿಂಗಾನುಪಾತ ವರದಿ, ವಾರದ ಮಳೆ ಬೆಳೆ ವರದಿ, ಹಣ್ಣು ಮತ್ತು ತರಕಾರಿ ಸಮೀಕ್ಷೆಗಳನ್ನು ಸಿದ್ಧಪಡಿಸುವುದು ಮೊದಲಾದ ಕಾರ್ಯಗಳನ್ನು ಈ ಕಚೇರಿ ನಿರ್ವಹಿಸುತ್ತದೆ. ನಿರ್ದೇಶಕ, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು ಅವರು ಮೇಲಧಿಕಾರಿಯಾಗಿರುತ್ತಾರೆ.

## ಕಂದಾಯ ಇಲಾಖೆ

ಸರಕಾರ ಮತ್ತು ಸಾರ್ವಜನಿಕರ ನಡುವಿನ ಪ್ರಮುಖ ಕೊಂಡಿಯಂತೆ ಕಾರ್ಯನಿರ್ವಹಿಸುವ ಕಂದಾಯ ಇಲಾಖೆಯು ಸರ್ಕಾರದ ಬಹುಮುಖ್ಯ ಇಲಾಖೆಗಳಲ್ಲಿ ಪ್ರಧಾನವಾಗಿ ಗುರುತಿಸುವಂತಹದ್ದು ಆಗಿದೆ. ಜಿಲ್ಲಾಧಿಕಾರಿಯು ಈ ಇಲಾಖೆಯ ಮುಖ್ಯಸ್ಥರಾಗಿದ್ದು ಅವರು ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರ ಹೊಂದಿರುತ್ತಾರೆ. ರಾಜ್ಯಗಳ ಪುನಾರಚನೆಗೆ ಮುನ್ನ ಜಿಲ್ಲಾ ಕಲೆಕ್ಟರ್ ಎಂದು ಇದ್ದ ಹುದ್ದೆಯ ಹೆಸರು ಬಳಿಕ

ಡೆಪ್ಯುಟಿಕಮೀಷನರ್ ಎಂದು ಇದ್ದ ಹುದ್ದೆಯ ಹೆಸರು ಬಳಿಕ ಡೆಪ್ಯುಟಿಕಮೀಷನರ್ ಅಥವಾ ಜಿಲ್ಲಾಧಿಕಾರಿ ಎಂದು ಬದಲಾಗಿದೆ. ಜಿಲ್ಲಾಧಿಕಾರಿಯು ಜಿಲ್ಲಾ ಆಡಳಿತಾಧಿಕಾರಿ ಮತ್ತು ದಂಡಾಧಿಕಾರಿಯೂ ಆಗಿರುತ್ತಾರೆ. ಇವರ ಅಧೀನದಲ್ಲಿ ಕಾರ್ಯನಿರ್ವಹಿಸುವ ಉಪವಿಭಾಗಾಧಿಕಾರಿ ಹಾಗೂ ತಹಸಿಲ್ದಾರ್‌ಗಳು ಆಯಾ ಕಚೇರಿಯ ಮುಖ್ಯಸ್ಥರಾಗಿರುತ್ತಾರೆ. (ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಂಗಳೂರು ಮತ್ತು ಬಂಟ್ವಾಳ ತಾಲುಕುಗಳ ವ್ಯಾಪ್ತಿ) ಹಾಗೂ ಪುತ್ತೂರು (ಪುತ್ತೂರು,ಸುಳ್ಯ ಮತ್ತು ಬೆಳ್ತಂಗಡಿ ತಾಲೂಕುಗಳ ವ್ಯಾಪ್ತಿ) ಎಂಬ ಎರಡು ಉಪವಿಭಾಗಗಳು ಹಾಗೂ ಐದು ತಾಲೂಕುಗಳಿವೆ). ಸಮಾಜ ಕಲ್ಯಾಣ, ಆಹಾರ ಮತ್ತು ನಾಗರಿಕ ಪೂರೈಕೆ, ಆರೋಗ್ಯ ಮತ್ತಿತರ ಇಲಾಖೆಗಳಿಗೆ ಜಿಲ್ಲಾ ಮಟ್ಟದಲ್ಲಿ ಆಯಾ ಇಲಾಖೆಯ ಅಧಿಕಾರಿಗಳು ಇದ್ದರೂ ಆ ಇಲಾಖಾ ಕಾರ್ಯಗಳ ಮೇಲ್ವಿಚಾರಣೆ ಸಹ ಜಿಲ್ಲಾಧಿಕಾರಿಯವರದಾಗಿರುತ್ತದೆ. ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ, ಬೆಂಗಳೂರು ಅವರು ಮೇಲಧಿಕಾರಿಯಾಗಿರುತ್ತಾರೆ. (ವಿವರಕ್ಕೆ ಆಡಳಿತ ಮತ್ತು ರಾಜಸ್ವ ಅಧ್ಯಾಯ ನೋಡಿ).

## ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಭಾಷೆ, ಸಾಹಿತ್ಯ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ಕನ್ನಡ ಸಂಸ್ಕೃತಿಯ ಸಂರಕ್ಷಣೆ ಹಾಗೂ ಅಭಿವೃದ್ಧಿಯನ್ನು ಮುಖ್ಯ ಧ್ಯೇಯೋದ್ದೇಶವಾಗಿ ಹೊಂದಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಿಲ್ಲಾ ಕಚೇರಿಯು ಮಂಗಳೂರಿನಲ್ಲಿದ್ದು, ಸಹಾಯಕ ನಿರ್ದೇಶಕ ಇದರ ಮುಖ್ಯಸ್ಥರಾಗಿರುತ್ತಾರೆ. ದ್ವಿತೀಯ ದರ್ಜೆ ಸಹಾಯಕ ಹಾಗೂ ದಲಾಯಿತ ಈ ಕಚೇರಿಯಲ್ಲಿನ ಇತರ ಸಿಬ್ಬಂದಿಯಾಗಿದ್ದಾರೆ. ದಕ್ಷಿಣ ಕನ್ನಡ ಜಿಲ್ಲಾ ಕಾರ್ಯ ವ್ಯಾಪ್ತಿ ಹೊಂದಿರುವ ಸಹಾಯಕ ನಿರ್ದೇಶಕ ಕೇಂದ್ರ ಕಚೇರಿಯು ಕಾಲ ಕಾಲಕ್ಕೆ ಹಮ್ಮಿಕೊಳ್ಳುವ ಸರಕಾರದ ಸಿಬ್ಬಂದಿಗೆ ಆಡಳಿತ ಕನ್ನಡ ಕಾರ್ಯಶಿಬಿರ, ಚಿಗುರು, ಸಾಂಸ್ಕೃತಿಕ ಸೌರಭ, ಕಾವ್ಯ ಕಾವೇರಿ, ಸಂಧ್ಯಾರಾಗ, ಉದ್ಯಾನವನದಲ್ಲಿ ಉದಯರಾಗ ಮೊದಲಾದ ಕಾರ್ಯಕ್ರಮಗಳಲ್ಲದೆ ಸಾಂಸ್ಕೃತಿಕ ಜಿಲ್ಲಾ ಉತ್ಸವ, ಗಡಿನಾಡ ಉತ್ಸವ, ಬಯಲು ರಂಗಮಂದಿರಗಳ ನಿರ್ಮಾಣಕ್ಕೆ ಧನಸಹಾಯ, ಸಾಹಿತಿ ಕಲಾವಿದರಿಗೆ ಮಾಸಾಶನ ಮೊದಲಾದ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಕೇಂದ್ರ ಕಚೇರಿಗೆ ನೆರವಾಗುತ್ತದೆ. ನಿರ್ದೇಶಕ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಅವರು ಮೇಲಧಿಕಾರಿಯಾಗಿರುತ್ತಾರೆ.

## ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ

ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿಯು ೧೯೯೪ರಿಂದ ಮಂಗಳೂರಿನಲ್ಲಿ ಅಸ್ತಿತ್ವಕ್ಕೆ ಬಂದಿರುತ್ತದೆ. ಕೊಂಕಣಿ ಸಾಹಿತ್ಯ ಹಾಗೂ ಸಂಶೋಧನಾ ಕ್ಷೇತ್ರಗಳಿಗೆ ಉತ್ತೇಜನ ನೀಡುವುದು, ಕೊಂಕಣಿ ಕಲೆ, ಜಾನಪದ, ಸಂಸ್ಕೃತಿಗಳ ಬೆಳವಣಿಗೆಗೆ ಅಗತ್ಯವಾದ ಕಾರ್ಯಕ್ರಮಗಳನ್ನು ರೂಪಿಸುವುದು, ಕೊಂಕಣಿ ಪುಸ್ತಕಗಳ ಪ್ರಕಟಣೆ, ಗ್ರಂಥಾಲಯ ಸ್ಥಾಪನೆ, ಕೊಂಕಣಿ ಸಾಹಿತ್ಯ – ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಮಹತ್ವದ ಕಾರ್ಯಮಾಡಿದ ಗಣ್ಯರನ್ನು ಸನ್ಮಾನಿಸುವುದು ಮೊದಲಾದ ಧ್ಯೇಯೋದ್ದೇಶಗಳು ಈ ಅಕಾಡೆಮಿಯದಾಗಿವೆ. ಶಾಲೆಗಳಲ್ಲಿ ಕೊಂಕಣಿ ಭಾಷೆಯನ್ನು ಆರನೇ ತರಗತಿಯಿಂದ ಐಚ್ಛಿಕ ವಿಷಯವಾಗಿ ಕಲಿಸುವುದು, ಕೊಂಕಣಿ ನಿಘಂಟು ತಯಾರಿಸುವುದು, ಕೊಂಕಣಿ ಕವಿತೆ ಹಾಗೂ ಸಂಗೀತಗಳಿಗೆ ಸಂಬಂಧಿಸಿದ ಕಾರ್ಯಾಗಾರಗಳು, ಕೊಂಕಣಿ ಮಹನೀಯರೊಂದಿಗೆ ಸಂವಾದ, ಕೊಂಕಣಿ ಯುವ ಮಹೋತ್ಸವ, ಕೊಂಕಣಿ ಮಾನ್ಯತಾ ದಿವಸಾಚರಣೆ ಮೊದಲಾದ ಕಾರ್ಯಕ್ರಮಗಳನ್ನು ಅಕಾಡೆಮಿಯು ಪ್ರಸ್ತುತ ಕಾರ್ಯರೂಪಕ್ಕೆ ತರುತ್ತಿದೆ. ಸರಕಾರದಿಂದ ನೇಮಿತರಾದ ಅಧ್ಯಕ್ಷರು ಹಾಗೂ ಸದಸ್ಯರ ಸಮಿತಿಯು ಅಕಾಡೆಮಿ ಕೈಗೊಳ್ಳಬೇಕಾದ ಯೋಜನೆಗಳನ್ನು ರೂಪಿಸುತ್ತದೆ. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು ಅವರು ಮೇಲಧಿಕಾರಿಯಾಗಿರುತ್ತಾರೆ.

## ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವ್ಯಾಪ್ತಿಗೆ ಬರುವ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯು ಮಂಗಳೂರಿನಲ್ಲಿ ೧೯೯೪ರಿಂದ ಕಾರ್ಯಾರಂಭ ಮಾಡಿದೆ. ತುಳು ಸಾಹಿತ್ಯದ ಅಧ್ಯಯನ, ಸಂಶೋಧನೆಗಳಿಗಾಗಿ ಉತ್ತೇಜನ ನೀಡುವುದು, ಪುಸ್ತಕಗಳ ಪ್ರಕಟಣೆ, ಗ್ರಂಥಾಲಯಗಳ ಸ್ಥಾಪನೆ, ತುಳು ಜಾನಪದ, ಕಲೆ, ಸಂಸ್ಕೃತಿಗಳ ಬೆಳವಣಿಗೆಗೆ ಅಗತ್ಯವಾದ ಕಾರ್ಯಕ್ರಮಗಳನ್ನು ನಡೆಸುವುದು, ತುಳುಕ್ಷೇತ್ರದಲ್ಲಿ ಮಹತ್ವದ ಸಾಧನೆ ಮಾಡಿದ ಮಹನೀಯರನ್ನು ಸನ್ಮಾನಿಸುವುದು ಮೊದಲಾದ ಧ್ಯೇಯೋದ್ದೇಶಗಳನ್ನು ಈ ಅಕಾಡೆಮಿ ಹೊಂದಿದೆ. ತುಳುಭವನ ನಿರ್ಮಾಣ, ತುಳು ಚಿತ್ರಗೀತೆಗಳ ಸಿ.ಡಿ.ಮುದ್ರಣ, ತುಳು ಬಾರದವರಿಗೆ ತುಳು ಕಲಿಸುವುದು ಮೊದಲಾದ ಕಾರ್ಯಕ್ರಮಗಳು ಪ್ರಸ್ತುತ ಅನುಷ್ಠಾನಗೊಳ್ಳುತ್ತಿವೆ.

ಸರಕಾರದಿಂದ ನೇಮಿತರಾದ ಅಧ್ಯಕ್ಷರು ಹಾಗೂ ಸದಸ್ಯರು ಕಾಲಕಾಲಕ್ಕೆ ಕೈಗೊಳ್ಳುವ ನಿರ್ಣಯಗಳನ್ನು ಅಕಾಡೆಮಿಯ ರಿಜಿಸ್ಟ್ರಾರ್ ಅವರು ಕಾರ್ಯರೂಪಕ್ಕೆ ತರುತ್ತಾರೆ. ಕರ್ನಾಟಕ ರಾಜ್ಯ ಅಕಾಡೆಮಿಗಳ ಬೈಲಾ, ಕರ್ನಾಟಕ ನಾಗರಿಕ ಸೇವಾ ನಿಯಮ ಮತ್ತಿತರ ನಿಯಮ ಮತ್ತು ಅಧಿನಿಯಮಗಳನ್ನು ಅಕಾಡೆಮಿಯು ತನ್ನ ಕಚೇರಿ ನಿರ್ವಹಣೆಯಲ್ಲಿ ಪಾಲಿಸುತ್ತದೆ. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು ಅವರು ಮೇಲಧಿಕಾರಿಯಾಗಿರುತ್ತಾರೆ.

## ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ನಗರ ಮತ್ತು ಪಟ್ಟಣಗಳ ಪ್ರದೇಶದಲ್ಲಿ ನೀರು ಸರಬರಾಜು ಹಾಗೂ ಒಳಚರಂಡಿ ವ್ಯವಸ್ಥೆ ಕಲ್ಪಿಸುವ ಉದ್ದೇಶದಿಂದ ಮಂಗಳೂರಿನಲ್ಲಿ ೧೪-೦೮-೧೯೭೫ರಿಂದ ಈ ಕಚೇರಿಯು ಕಾರ್ಯನಿರ್ವಹಿಸುತ್ತಿದೆ. ಆ ಮೊದಲು ಈ ಕಾರ್ಯಗಳನ್ನು ಜನಾರೋಗ್ಯ ಇಲಾಖೆ (ಪಿಡಬ್ಲ್ಯುಡಿ) ನಿರ್ವಹಿಸುತ್ತಿದ್ದಿತು. ಸಹಾಯಕ ಕಾರ್ಯಪಾಲಕ ಅಭಿಯಂತರ ಅವರು ಈ ಕಚೇರಿಯ ಮುಖ್ಯಸ್ಥರಾಗಿದ್ದು, ಸಹಾಯಕ ಕಾರ್ಯಪಾಲಕ ಅಭಿಯಂತರ, ಪ್ರಥಮ ದರ್ಜೆ ಸಹಾಯಕ ಮೊದಲಾದ ಇತರ ಸಿಬ್ಬಂದಿ ಅವರ ನೆರವಿಗಿದ್ದಾರೆ. ಮಂಗಳೂರು ಉಪವಿಭಾಗಕ್ಕೆ ಸೇರಿದ ಈ ಕಚೇರಿಯ ಅಧಿಕಾರ ವ್ಯಾಪ್ತಿಯು ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳನ್ನು ಒಳಗೊಂಡಿರುತ್ತದೆ. ಕಚೇರಿಯು ಪ್ರಸ್ತುತ ಸುಳ್ಯ ಹಾಗೂ ಬಂಟ್ವಾಳ ಪಟ್ಟಣಗಳ ಒಳಚರಂಡಿ ಯೋಜನೆ, ಕಾರ್ಕಳ ಮತ್ತು ಮುಲ್ಕಿ ಪಟ್ಟಣಗಳ ನೀರು ಸರಬರಾಜು ಯೋಜನೆ ಮತ್ತಿತರ ಅಭಿವೃದ್ಧಿ ಚಟುವಟಿಕೆಗಳನ್ನು ಕೈಗೆತ್ತಿಕೊಂಡಿದೆ. ಕಾರ್ಯಪಾಲಕ ಅಭಿಯಂತರ, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಹಾಸನ ವಿಭಾಗ, ಹಾಸನ ಅವರು ಮೇಲಧಿಕಾರಿಯಾಗಿದ್ದಾರೆ.

## ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ

ಮಂಗಳೂರಿನಲ್ಲಿ ೧೯೭೫ರಿಂದ ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ ಎಂಬ ಹೆಸರಿನಿಂದ ಕಾರ್ಯನಿರ್ವಹಿಸುತ್ತಿರುವ ಈ ಕಚೇರಿಗೆ ಆ ಮೊದಲು ಹರಿಜನ/ಗಿರಿಜನ ಅಭಿವೃದ್ಧಿ ನಿಗಮ ಎಂಬ ಹೆಸರಿದ್ದಿತು. ಈ ಕಚೇರಿಯ ಮುಖ್ಯಸ್ಥರ ಹುದ್ದೆಯ ಹೆಸರು ೧೯೭೫ರಲ್ಲಿ ಜಿಲ್ಲಾ ಮಟ್ಟದ ಪರಿಶೀಲನಾಧಿಕಾರಿ ಎಂದು ಇದ್ದದ್ದು ೧೯೮೪ರಲ್ಲಿ ಜಿಲ್ಲಾ ಅಭಿವೃದ್ಧಿ ಅಧಿಕಾರಿ ಎಂದೂ, ೧೯೮೯ರಲ್ಲಿ ಯೋಜನಾಧಿಕಾರಿ ಎಂದೂ ಆಗಿ, ೧೯೯೦ರಿಂದ ಜಿಲ್ಲಾ ವ್ಯವಸ್ಥಾಪಕ ಎಂದು ಬದಲಾಗಿರುತ್ತದೆ. ವಸೂಲಾತಿ ಅಧಿಕಾರಿ, ಕಚೇರಿ ಅಧೀಕ್ಷಕ ಮೊದಲಾದ ಸಿಬ್ಬಂದಿ ವರ್ಗ ಇವರ ನೆರವಿಗೆ ಇದೆ. ತಾಲೂಕು ಸಮಾಜ ಕಲ್ಯಾಣ ಇಲಾಖೆಯ ಅಥವಾ ತಾಲೂಕು ಪಂಚಾಯತ್ ಕಚೇರಿಯಲ್ಲಿನ ತಾಲೂಕು ಅಭಿವೃದ್ಧಿ ಅಧಿಕಾರಿಗಳು ತಾಲೂಕು ಮಟ್ಟದಲ್ಲಿ ನಿಗಮದ ಯೋಜನೆಗಳನ್ನು ಕಾರ್ಯರೂಪಕ್ಕೆ ತರುತ್ತಾರೆ. ಪರಿಶಿಷ್ಟ ಜಾತಿ ಮತ್ತು ವರ್ಗಗಳ ಜನರ ಆರ್ಥಿಕ ಅಭ್ಯುದಯವನ್ನು ತನ್ನ ಮುಖ್ಯ ಧ್ಯೇಯೋದ್ದೇಶವಾಗುಳ್ಳ ಈ ಕಚೇರಿಯು ಜಿಲ್ಲೆಯ ಅರ್ಹ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಫಲಾನುಭವಿಗಳಿಗೆ ಸಾಲ ಸೌಲಭ್ಯ ಒದಗಿಸುವುದು, ಸ್ವಯಂ ಉದ್ಯೋಗ ಯೋಜನೆ, ಭೂ ಒಡೆತನ ಯೋಜನೆ, ನೇರಸಾಲ, ದೇವದಾಸಿ ಪುನರ್ವಸತಿ ಯೋಜನೆ, ಕೊರಗ ಅಭಿವೃದ್ಧಿ ಯೋಜನೆ ಜಾರಿಗೊಳಿಸುವುದು ಮೊದಲಾದ ಕಾರ್ಯಗಳನ್ನು ನಡೆಸುತ್ತಿದೆ. ವ್ಯವಸ್ಥಾಪಕ ನಿರ್ದೇಶಕ, ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ಅವರು ಮೇಲಧಿಕಾರಿಯಾಗಿರುತ್ತಾರೆ.

## ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಲಿ

ಪರಿಸರ ಮತ್ತು ಜೀವಿಪರಿಸ್ಥಿತಿ ಶಾಸ್ತ್ರ ಇಲಾಖೆಗೆ ಸೇರಿದ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಲಿಯ ಪ್ರಾದೇಶಿಕ ಕಚೇರಿಯು ಮಂಗಳೂರಿನಲ್ಲಿ ೧೯೯೧ರಿಂದ ಕಾರ್ಯನಿರ್ವಹಿಸುತ್ತಿದೆ. ಆಗ ಉಪ ಪರಿಸರ ಅಧಿಕಾರಿ ಎಂದು ಇದ್ದ ಕಚೇರಿ ಮುಖ್ಯಸ್ಥರ ಹುದ್ದೆಯ ಹೆಸರು ೧೯೯೭ರಿಂದ ಪರಿಸರ ಅಧಿಕಾರಿ – ಎಂದು ಬದಲಾವಣೆಗೊಂಡಿರುತ್ತದೆ. ದಕ್ಷಿಣ ಕನ್ನಡ ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರ ಹೊಂದಿರುವ ಈ ಕಚೇರಿಯಲ್ಲಿ ಉಪ ಪರಿಸರ ಅಧಿಕಾರಿ, ಸಹಾಯಕ ಪರಿಸರ ಅಧಿಕಾರಿ, ವೈಜ್ಞಾನಿಕ ಅಧಿಕಾರಿ, ಪ್ರಯೋಗಶಾಲಾ ಸಹಾಯಕ ಮತ್ತಿತರ ಅಧಿಕಾರಿ, ಸಿಬ್ಬಂದಿ ವರ್ಗ ಕಚೇರಿ ಮುಖ್ಯಸ್ಥರ ಕಾರ್ಯನಿರ್ವಹಣೆಯಲ್ಲಿ ನೆರವಾಗುತ್ತಾರೆ.

ಉದ್ದಿಮೆ, ಆಸ್ಪತ್ರೆ, ಸ್ಥಳೀಯ ಸಂಸ್ಥೆ ಮೊದಲಾದವು ಜಲ, ವಾಯು, ಭೂಮಿ ಇತ್ಯಾದಿಗಳಿಗೆ ಸಂಬಂಧಿಸಿ ಮಾಲಿನ್ಯ ಮಾಡದಂತೆ ನಿಯಂತ್ರಿಸುವುದು ಹಾಗೂ ಮಾಲಿನ್ಯ ಉಂಟು ಮಾಡುವ ಸಂಸ್ಥೆಗಳ ವಿರುದ್ಧ ಕಾನೂನಿನಂತೆ ಕ್ರಮ ತೆಗೆದುಕೊಳ್ಳುವುದು ಈ ಕಚೇರಿಯ ಮುಖ್ಯ ಧ್ಯೇಯೋದ್ದೇಶವಾಗಿದೆ. ಇದರ ಅನ್ವಯ ಜಲಮಾಲಿನ್ಯ ನಿಯಂತ್ರಣ ಕಾಯಿದೆ ೧೯೭೪, ವಾಯುಮಾಲಿನ್ಯ ನಿಯಂತ್ರಣ

ಕಾಯಿದೆ ೧೯೮೧, ಪರಿಸರ ಸಂರಕ್ಷಣಾ ಕಾಯಿದೆ ೧೯೮೬ ಮೊದಲಾದ ಕಾಯಿದೆ, ನಿಯಮಗಳನ್ನು ಈ ಕಚೇರಿ ತನ್ನ ಕಾರ್ಯಗಳಲ್ಲಿ ಅನುಸರಿಸುತ್ತದೆ. ಶಾಲಾಮಕ್ಕಳು ಹಾಗೂ ನಾಗರಿಕರಿಗೆ ಸ್ಥಳೀಯ ಪರಿಸರ ಕುರಿತು ಮಾಹಿತಿ ನೀಡುವ ವಿವಿಧ ಕಾರ್ಯಕ್ರಮಗಳನ್ನು ನಡೆಸುತ್ತದೆ. ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಂಗಳೂರು ಅವರು ಮೇಲಧಿಕಾರಿಯಾಗಿರುತ್ತಾರೆ.

### ಕರ್ನಾಟಕ ಲೋಕಾಯುಕ್ತ

ಮಂಗಳೂರಿನಲ್ಲಿ ೧೯೮೫ರಿಂದ ಕಾರ್ಯನಿರ್ವಹಿಸುತ್ತಿರುವ ಕರ್ನಾಟಕ ಲೋಕಾಯುಕ್ತದ ಪೋಲೀಸ್ ಅಧೀಕ್ಷಕರ ಕಚೇರಿಯು ದಕ್ಷಿಣ ಕನ್ನಡ, ಉಡುಪಿ ಹಾಗೂ ಕೊಡಗು ಜಿಲ್ಲೆಗಳ ಅಧಿಕಾರ ವ್ಯಾಪ್ತಿ ಹೊಂದಿರುತ್ತದೆ. ಪೋಲೀಸ್ ಅಧೀಕ್ಷಕ ಅವರು ಈ ಕಚೇರಿಯ ಮುಖ್ಯಸ್ಥರಾಗಿದ್ದು ಕಚೇರಿ ಅಧೀಕ್ಷಕ, ಶೀಘ್ರಲಿಪಿಗಾರ, ಪ್ರಥಮ ದರ್ಜೆ ಸಹಾಯಕ ಮೊದಲಾದ ಸಿಬ್ಬಂದಿಯು ಅವರೊಂದಿಗೆ ಕಾರ್ಯನಿರ್ವಹಿಸುತ್ತಿದ್ದಾರೆ. ಲಂಚ ನಿರೋಧ ಕಾಯ್ದೆಯನ್ನು ಅನುಷ್ಠಾನಗೊಳಿಸುವ ಮೂಲಕ ಸರಕಾರಿ ಕಚೇರಿಗಳಲ್ಲಿನ ಕಾರ್ಯಚಟುವಟಿಕೆಗಳು ತ್ವರಿತವಾಗಿ ನಡೆಯುವಂತೆ ಮಾಡುವುದು, ಅಕ್ರಮ ಸಂಭಾವನೆ ಬಗೆಗೆ ಲಿಖಿತ ದೂರು ಬಂದಲ್ಲಿ ಆಯಾ ಕಚೇರಿಗೆ ಭೇಟಿ ನೀಡಿ ಸೂಕ್ತ ಕ್ರಮ ಜರುಗಿಸುವುದು, ಲೋಕಾಯುಕ್ತ ಅಥವಾ ಉಪಲೋಕಾಯುಕ್ತರಿಂದ ಬಂದ ವಿಚಾರಣಾ ಅರ್ಜಿಗಳ ಸಂಬಂಧ ವಿಚಾರಣೆ ನಡೆಸಿ ವರದಿ ನೀಡುವುದು ಮೊದಲಾದ ಕಾರ್ಯಚಟುವಟಿಕೆಗಳನ್ನು ಈ ಕಚೇರಿ ನಡೆಸುತ್ತಿದೆ. ಲಂಚ ನಿರ್ಮೂಲನಾ ಕಾಯಿದೆ ೧೯೮೮ ಮತ್ತಿತರ ಕಾಯಿದೆ, ನಿಯಮಗಳನ್ನು ಈ ಕಚೇರಿ ತನ್ನ ಆಡಳಿತ ನಿರ್ವಹಣೆಯಲ್ಲಿ ಅನುಸರಿಸುತ್ತಿದೆ. ಮಂಗಳೂರು, ಉಡುಪಿ ಹಾಗೂ ಮಡಿಕೇರಿಗಳಲ್ಲಿ ಕಚೇರಿ ಹೊಂದಿರುವ ಆರಕ್ಷಕ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ ಅವರು ಈ ಕಚೇರಿಯ ಅಧೀನದಲ್ಲಿ ಆಯಾ ಜಿಲ್ಲಾ ವ್ಯಾಪ್ತಿ ಕಾರ್ಯನಿರ್ವಹಣೆ ಮಾಡುತ್ತಾರೆ. ಆರಕ್ಷಕ ಮಹಾನಿರೀಕ್ಷಕ, ಕರ್ನಾಟಕ ಲೋಕಾಯುಕ್ತ ಬೆಂಗಳೂರು ಅವರು ಮೇಲಧಿಕಾರಿಯಾಗಿರುತ್ತಾರೆ.

### ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ (ಮೆಸ್ಕಾಂ)

ದಕ್ಷಿಣ ಕನ್ನಡ ಹಾಗೂ ಉಡುಪಿ– ಈ ಎರಡೂ ಜಿಲ್ಲೆಗಳಲ್ಲಿ ಪ್ರಸರಣ ಮಾರ್ಗಗಳ ಮತ್ತು ವಿದ್ಯುತ್ ಉಪಕೇಂದ್ರಗಳ ನಿರ್ಮಾಣ ಹಾಗೂ ನಿರ್ವಹಣೆಯ ಹೊಣೆಯೊಂದಿಗೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ–ಪ್ರಸರಣ (ಕಾಮಗಾರಿ ಮತ್ತು ನಿರ್ವಹಣೆ) ವೃತ್ತ ಕಚೇರಿಯು ಮಂಗಳೂರಿನಲ್ಲಿ ೦೧–೦೬–೨೦೦೨ರಿಂದ ಕಾರ್ಯನಿರ್ವಹಿಸುತ್ತಿದೆ. ಆ ಮೊದಲು ಇಡೀ ರಾಜ್ಯದಲ್ಲಿ ವಿದ್ಯುತ್ ವಿತರಣೆ, ಪ್ರಸರಣೆ ಮುಂತಾದ ಎಲ್ಲಾ ಕಾರ್ಯಗಳನ್ನು ಕ.ವಿ.ಪ್ರ.ನಿ.ನಿ. ಯೇ ನಿರ್ವಹಿಸುತ್ತಿದ್ದಿತು ಹಾಗೂ ಮಂಗಳೂರಿನ ಪ್ರಸರಣ ವೃತ್ತವು ಪ್ರಸರಣ ಮಾರ್ಗಗಳು ಹಾಗೂ ವಿತರಣಾ ಕೇಂದ್ರಗಳ ವೃತ್ತ ಎಂಬುದಾಗಿ ಕರೆಯಲ್ಪಡುತ್ತಿದ್ದಿತು. ಅಲ್ಲದೆ, ಇದು ಮಂಗಳೂರು ವಲಯಕ್ಕೆ ಸೇರಿದ ದಕ್ಷಿಣ ಕನ್ನಡ, ಉಡುಪಿ ವಿಭಾಗ, ಚಿಕ್ಕಮಗಳೂರು, ಕೊಡಗು, ಶಿವಮೊಗ್ಗ, ಚಾಮರಾಜನಗರ, ಮೈಸೂರು ಮತ್ತು ಮಂಡ್ಯ ಜಿಲ್ಲೆಗಳ ವ್ಯಾಪ್ತಿ ಹೊಂದಿದ್ದು, ಪ್ರಸರಣ ಮಾರ್ಗಗಳು ಹಾಗೂ ವಿದ್ಯುತ್ ವಿತರಣ ಕೇಂದ್ರಗಳ ನಿರ್ವಹಣೆಯ ಕಾರ್ಯಭಾರ ಹೊಂದಿ, ಮಂಗಳೂರಿನಲ್ಲಿ ವಲಯ ಮುಖ್ಯ ಅಭಿಯಂತರರ ಕೈಕೆಳಗೆ ಕೆಲಸ ನಿರ್ವಹಿಸುತ್ತಿದ್ದಿತು. ೨೦೦೨ರಲ್ಲಿ ಎಸ್ಕಾಂಗಳ ರಚನೆಯಾದ ಮೇಲೆ ಕವಿಪ್ರನಿದ ವಿದ್ಯುತ್ ವಿತರಣಾ ಕೇಂದ್ರಗಳು ಹಾಗೂ ಪ್ರಸರಣ ಮಾರ್ಗಗಳ ನಿರ್ಮಾಣ ಮತ್ತು ನಿರ್ವಹಣಾ ಕೆಲಸಕ್ಕಾಗಿ ಮೈಸೂರಿನಲ್ಲಿ ಪ್ರತ್ಯೇಕ ವಲಯ ಕಚೇರಿಯನ್ನು ತೆರೆದ ಬಳಿಕ ಮಂಗಳೂರು ವೃತ್ತವು ಮುಖ್ಯ ಇಂಜಿನಿಯರ್ (ವಿ.)ಪ್ರಸರಣೆ, ಮೈಸೂರು–ಇವರ ವ್ಯಾಪ್ತಿಗೆ ಒಳಪಟ್ಟಿರುತ್ತದೆ.

ಅಧೀಕ್ಷಕ ಅಭಿಯಂತರ (ವಿದ್ಯುತ್), ಪ್ರಸರಣೆ (ಕಾಮಗಾರಿ ಮತ್ತು ನಿರ್ವಹಣೆ) ಅವರು ಮಂಗಳೂರು ವೃತ್ತ ಕಚೇರಿಯ ಮುಖ್ಯಸ್ಥರಾಗಿದ್ದಾರೆ. ಅವರ ನೆರವಿಗೆ ಕಾರ್ಯನಿರ್ವಾಹಕ ಅಭಿಯಂತರರು, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಮೊದಲಾದ ಅಧಿಕಾರಿ, ಸಿಬ್ಬಂದಿಗಳಿದ್ದಾರೆ. ವ್ಯವಸ್ಥಾಪಕ ನಿರ್ದೇಶಕ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಆಡಳಿತ ಕಚೇರಿ, ಬೆಂಗಳೂರು ಅವರು ಮೇಲಧಿಕಾರಿಯಾಗಿರುತ್ತಾರೆ.

### ಕರ್ನಾಟಕ ಸರಕಾರಿ ವಿಮಾ ಇಲಾಖೆ

ಅರ್ಹ ಸರಕಾರಿ ನೌಕರರಿಗೆ ಕಡ್ಡಾಯ ಜೀವ ವಿಮೆ, ವಿಮಾದಾರರಿಗೆ ಸಾಲ ಮಂಜೂರಾತಿ, ಸಕಾಲದಲ್ಲಿ ಹಕ್ಕು ಪ್ರಕರಣಗಳ ಇತ್ಯರ್ಥ ಮಾಡುವುದು ಮೊದಲಾದ ಧ್ಯೇಯೋದ್ದೇಶಗಳಿಂದ ಜಿಲ್ಲಾ ವಿಮಾ ಅಧಿಕಾರಿ ಕಚೇರಿಯು ಮಂಗಳೂರಿನಲ್ಲಿ ೧೯೭೬ರಿಂದ

ಕಾರ್ಯನಿರ್ವಹಿಸುತ್ತಿದೆ. ಜಿಲ್ಲಾ ವ್ಯಾಪ್ತಿ ಅಧಿಕಾರ ಹೊಂದಿರುವ ಈ ಕಚೇರಿಯಲ್ಲಿ ಅಧೀಕ್ಷಕ, ಪ್ರಥಮ ದರ್ಜೆ ಸಹಾಯಕ ಮತ್ತಿತರ ಸಿಬ್ಬಂದಿ ವರ್ಗವಿದೆ. ಮರಣಜನ್ಯ, ವಿಮಾತ್ಯಾಗ ಮೌಲ್ಯ ಪ್ರಕರಣಗಳ ಇತ್ಯರ್ಥ, ಸರಕಾರಿ ವಾಹನಗಳಿಗೆ ವಿಮೆ, ನಿಗಮ, ಮಂಡಳಿ, ಅನುದಾನಿತ ಶಿಕ್ಷಣ ಸಂಸ್ಥೆ ಮೊದಲಾದ ಸಂಸ್ಥೆಗಳ ನೌಕರರ ಕುಟುಂಬ ಕಲ್ಯಾಣನಿಧಿ ಪ್ರಕರಣಗಳ ಇತ್ಯರ್ಥ ಇತ್ಯಾದಿ ಕಾರ್ಯಗಳನ್ನು ಈ ಕಚೇರಿ ನಿರ್ವಹಿಸುತ್ತಿದೆ. ಕರ್ನಾಟಕ ಸರಕಾರಿ ನೌಕರರ ಕಡ್ಡಾಯ ವಿಮಾ ನಿಯಮಗಳು ೧೯೫೮ ಮತ್ತಿತರ ನಿಯಮ, ಅಧಿನಿಯಮಗಳನ್ನು ಈ ಕಚೇರಿಯು ಪಾಲಿಸುತ್ತದೆ. ಉಪ ನಿರ್ದೇಶಕ, ಕರ್ನಾಟಕ ಸರಕಾರಿ ವಿಮಾ ಇಲಾಖೆ, ಬೆಂಗಳೂರು ಅವರು ಮೇಲಧಿಕಾರಿಯಾಗಿರುತ್ತಾರೆ.

### ಕಾರ್ಮಿಕ ಇಲಾಖೆ

ಮಂಗಳೂರು ವಿಭಾಗದ ಸಹಾಯಕ ಕಾರ್ಮಿಕ ಆಯುಕ್ತರ ಕಚೇರಿಯು ಮಂಗಳೂರಿನಲ್ಲಿ ೧೯೬೫ರಿಂದ ಕಾರ್ಯನಿರ್ವಹಿಸುತ್ತಿದೆ. ಸಹಾಯಕ ಕಾರ್ಮಿಕ ಆಯುಕ್ತರ ಆಡಳಿತ ವ್ಯಾಪ್ತಿಗೆ ದಕ್ಷಿಣ ಕನ್ನಡ, ಉಡುಪಿ ಹಾಗೂ ಶಿವಮೊಗ್ಗ ಜಿಲ್ಲೆಗಳು ಸೇರಿವೆ. ಕಚೇರಿ ಸಹಾಯಕ, ಪ್ರಥಮ ದರ್ಜೆ ಸಹಾಯಕ ಮೊದಲಾದ ಸಿಬ್ಬಂದಿ ಇವರ ನೆರವಿಗಿದ್ದಾರೆ. ದಕ್ಷಿಣ ಕನ್ನಡ, ಉಡುಪಿ ಹಾಗೂ ಶಿವಮೊಗ್ಗಗಳಲ್ಲಿನ ಕಾರ್ಮಿಕ ಅಧಿಕಾರಿಗಳು ಆಯಾ ಜಿಲ್ಲೆಗಳ ಉಸ್ತುವಾರಿ ನೋಡಿಕೊಳ್ಳುತ್ತಾರೆ. ಬೀಡಿ ಮತ್ತು ಸಿಗಾರ್ ಕಾರ್ಮಿಕರು, ಬಾಲ ಕಾರ್ಮಿಕರು, ಗುತ್ತಿಗೆ ಕಾರ್ಮಿಕರು, ಕೈಗಾರಿಕಾ ವಿವಾದ, ಕಾರ್ಮಿಕ ಕಲ್ಯಾಣ ನಿಧಿ, ಹೆರಿಗೆ ಭತ್ಯೆ, ಬೋನಸ್ ಪಾವತಿ ಮೊದಲಾದವುಗಳಿಗೆ ಸಂಬಂಧಿಸಿದ ಕಾಯಿದೆ ಮತ್ತು ನಿಯಮಗಳನ್ನು ಈ ಕಚೇರಿಯು ತನ್ನ ಆಡಳಿತ ಕಾರ್ಯಗಳಲ್ಲಿ ಪಾಲಿಸುತ್ತದೆ. ಉಪ ಕಾರ್ಮಿಕ ಆಯುಕ್ತ, ಹಾಸನ ಪ್ರಾದೇಶಿಕ ಕಛೇರಿ, ಹಾಸನ ಹಾಗೂ ಕಾರ್ಮಿಕ ಆಯುಕ್ತ ಕಾರ್ಮಿಕ ಆಯುಕ್ತರ ಕಚೇರಿ, ಬೆಂಗಳೂರು ಅವರು ಮೇಲಧಿಕಾರಿಯಾಗಿರುತ್ತಾರೆ.

### ಖಜಾನೆ ಇಲಾಖೆ

ಹಿಂದೆ, ರಾಜಸ್ವ ಇಲಾಖೆಯ ವ್ಯಾಪ್ತಿಯಲ್ಲಿದ್ದ ಈ ಕಚೇರಿಯು ೧೯೬೪ರಿಂದ ಆರ್ಥಿಕ ಇಲಾಖೆಯ ಅಧೀನಕ್ಕೆ ಒಳಪಟ್ಟ ಖಜಾನೆ ನಿರ್ದೇಶನಾಲಯಕ್ಕೆ ಸೇರ್ಪಡೆಯಾಗಿರುತ್ತದೆ. ಜಿಲ್ಲಾ ಖಜಾನಾಧಿಕಾರಿ ಅವರು ಈ ಕಚೇರಿಯ ಮುಖ್ಯಸ್ಥರಾಗಿದ್ದು, ಸಹಾಯಕ ಖಜಾನಾಧಿಕಾರಿ, ಮುಖ್ಯ ಲೆಕ್ಕಿಗರು, ಸ್ಟ್ಯಾಂಪ್ ಹೆಡ್‌ಕ್ಲಾರ್ಕ್, ಉಪಖಜಾನಾಧಿಕಾರಿಗಳು, ನಗದು ಗುಮಾಸ್ತ ಮತ್ತಿತರ ಸಿಬ್ಬಂದಿ ಇವರ ಸಹಾಯಕ್ಕಿದ್ದಾರೆ. ಪತ್ರಾಂಕಿತ ಉಪಖಜಾನಾಧಿಕಾರಿಗಳು ಬಂಟ್ವಾಳ, ಬೆಳ್ತಂಗಡಿ, ಪುತ್ತೂರು, ಸುಳ್ಯ ತಾಲೂಕುಗಳು ಮತ್ತು ಮೂಡಬಿದ್ರೆ ಹೋಬಳಿ ಹಾಗೂ ಉಪಖಜಾನಾಧಿಕಾರಿಗಳು ಮುಲ್ಕಿ ಮತ್ತು ವಿಟ್ಲ ಹೋಬಳಿಗಳ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಾರೆ. ಸರಕಾರದ ವಿವಿಧ ಇಲಾಖೆಗಳ ಜಮಾ ಮತ್ತು ಪಾವತಿಗೆ ಸಂಬಂಧಿಸಿದ ಲೆಕ್ಕಪತ್ರ ನಿರ್ವಹಣೆ ಮಾಡುವುದು ಈ ಕಚೇರಿಯ ಮುಖ್ಯ ಧ್ಯೇಯೋದ್ದೇಶವಾಗಿದ್ದು, ಆ ಸಂಬಂಧ ಖಜಾನೆ ವ್ಯವಹಾರವನ್ನು ಆನ್‌ಲೈನ್‌ನಲ್ಲಿ ನಡೆಸುವುದು ಮೊದಲಾದ ಯೋಜನೆಗಳನ್ನು ಕಾರ್ಯರೂಪಕ್ಕೆ ತರುತ್ತಿದೆ. ಕರ್ನಾಟಕ ಆರ್ಥಿಕ ಸಂಹಿತೆ, ಕರ್ನಾಟಕ ಖಜಾನೆ ಕೋಡ್ ಮೊದಲಾದ ನಿಗದಿತ ಕಾಯಿದೆ ಮತ್ತು ನಿಯಮಗಳನ್ನು ಈ ಕಚೇರಿಯು ತನ್ನ ಕಾರ್ಯನಿರ್ವಹಣೆಯಲ್ಲಿ ಅನುಸರಿಸುತ್ತಿದೆ. ಖಜಾನೆ ನಿರ್ದೇಶಕರು, ಬೆಂಗಳೂರು ಅವರು ಮೇಲಾಧಿಕಾರಿ ಯಾಗಿರುತ್ತಾರೆ.

### ಗಣಿ ಮತ್ತು ಭೂ ವಿಜ್ಞಾನ ಇಲಾಖೆ

ಭೂ ವಿಜ್ಞಾನಿ ಕಚೇರಿ ಎಂದು ೧೯೭೦ರಿಂದ ಕಾರ್ಯಾರಂಭಗೊಂಡ ಈ ಕಚೇರಿಯ ಹೆಸರು ೨೦೦೧ರಿಂದ ಉಪನಿರ್ದೇಶಕರ ಕಚೇರಿ ಎಂದು ಬದಲಾಗಿರುತ್ತದೆ. ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳು ಇವರ ಆಡಳಿತಾಧಿಕಾರ ವ್ಯಾಪ್ತಿಗೆ ಒಳಪಟ್ಟಿದ್ದು, ಹಿರಿಯ ಭೂವಿಜ್ಞಾನಿ, ಭೂವಿಜ್ಞಾನಿ, ಕೊರೆಯುವ ಅಭಿಯಂತರ, ಹಿರಿಯ ಭೂಭೌತಶಾಸ್ತ್ರಜ್ಞ, ಅಧೀಕ್ಷಕ ಮೊದಲಾದ ಅಧಿಕಾರಿ, ಸಿಬ್ಬಂದಿ ವರ್ಗ ಇವರಿಗೆ ನೆರವಾಗುತ್ತಿದೆ. ಉಪಖನಿಜ ಮತ್ತು ಪ್ರಧಾನ ಖನಿಜಗಳ ರವಾನೆಗೆ ಪರವಾನಿಗೆ ನೀಡುವುದು, ಕಲ್ಲುಗಣಿ ಗುತ್ತಿಗೆ ಕರಾರು ಮಂಜೂರು ಮಾಡುವುದು, ರಾಜಸ್ವ ವಸೂಲಾತಿ, ಕೊಳವೆ ಬಾವಿಗಳಲ್ಲಿನ ನೀರು ಇಳುವರಿ ಪರೀಕ್ಷೆ ಮಾಡುವುದು, ಅನಧಿಕೃತ ಗಣಿಗಾರಿಕೆಯನ್ನು ತಡೆಯುವುದು ಮತ್ತು ದಂಡ ಹಾಕುವುದು ಮೊದಲಾದ ಕಾರ್ಯಗಳನ್ನು ಈ ಕಚೇರಿ ನೋಡಿಕೊಳ್ಳುತ್ತದೆ. ಕರ್ನಾಟಕ ಉಪ ಖನಿಜ ನಿಯಮ ೧೯೯೪, ಎಂ.ಎಂ.ಆರ್.ಡಿ.ಎಸ್. ೧೯೫೭ ಮೊದಲಾದ ಕಾಯಿದೆ ನಿಯಮಗಳನ್ನು ಈ ಕಚೇರಿ ಅನುಸರಿಸುತ್ತದೆ. ಜಂಟಿ ನಿರ್ದೇಶಕ, ದಕ್ಷಿಣ ವಲಯ, ಮೈಸೂರು–ಅವರು ಮೇಲಧಿಕಾರಿಯಾಗಿರುತ್ತಾರೆ.

## ಜಿಲ್ಲಾ ಉದ್ಯೋಗ ವಿನಿಮಯ ಕಛೇರಿ

ಉದ್ಯೋಗ ಮಾಹಿತಿ ಮತ್ತು ಮಾರ್ಗದರ್ಶನ ಹಾಗೂ ಉದ್ಯೋಗ ಮಾರುಕಟ್ಟೆ ಮಾಹಿತಿ ಸಂಗ್ರಹಣೆ ಮತ್ತು ವರದಿಗಳನ್ನು ರಾಜ್ಯ ಮತ್ತು ಕೇಂದ್ರ ಕಚೇರಿಗೆ ನೀಡುವುದು ಮೊದಲಾದ ಧ್ಯೇಯೋದ್ದೇಶಗಳನ್ನು ಹೊಂದಿರುವ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯು ಮಂಗಳೂರಿನಲ್ಲಿ ೧೯೫೧ರಿಂದ ಕಾರ್ಯನಿರ್ವಹಿಸುತ್ತಿದೆ. ದಕ್ಷಿಣ ಕನ್ನಡ ಜಿಲ್ಲಾ ವ್ಯಾಪ್ತಿ ಅಧಿಕಾರ ಹೊಂದಿರುವ ಉದ್ಯೋಗಾಧಿಕಾರಿ ಅವರು ಈ ಕಚೇರಿಯ ಮುಖ್ಯಸ್ಥರಾಗಿದ್ದು, ಸಹಾಯಕ ಉದ್ಯೋಗಾಧಿಕಾರಿ, ಪ್ರಥಮ ದರ್ಜೆ ಸಹಾಯಕ ಮೊದಲಾದ ಸಿಬ್ಬಂದಿಯನ್ನು ಹೊಂದಿದ್ದಾರೆ. ಉದ್ಯೋಗ ನೋಂದಣಿ, ನವೀಕರಣ, ಉದ್ಯೋಗಕ್ಕೆ ನಿಯೋಜಕರ ಬೇಡಿಕೆಗೆ ತಕ್ಕಂತೆ ಅಭ್ಯರ್ಥಿಗಳ ಪುರಸ್ಕರಣೆ, ಸಂಚಾರಿ ನೋಂದಣಿ, ಶಾಲಾ ಕಾಲೇಜುಗಳಲ್ಲಿ ವೃತ್ತಿ ಸಾಹಿತ್ಯ ಪ್ರದರ್ಶನ ಮತ್ತು ವೃತ್ತಿ ಉಪನ್ಯಾಸ ಕಾರ್ಯಕ್ರಮಗಳನ್ನು ನಡೆಸುವುದು ಮೊದಲಾದ ಚಟುವಟಿಕೆಗಳನ್ನು ಈ ಕಚೇರಿ ಹಮ್ಮಿಕೊಂಡಿದೆ. ನ್ಯಾಷನಲ್ ಎಂಪ್ಲಾಯ್‌ಮೆಂಟ್ ಮ್ಯಾನುಯಲ್ ಮತ್ತು ಅಧಿನಿಯಮ–೧೯೫೯ ಮತ್ತು ನಿಯಮ ೧೯೬೦ ಮೊದಲಾದ ನಿಯಮ, ಅಧಿನಿಯಮಗಳನ್ನು ಈ ಕಚೇರಿ ಅನುಸರಿಸುತ್ತದೆ. ನಿರ್ದೇಶಕ, ಉದ್ಯೋಗ ಮತ್ತು ತರಬೇತಿ ಇಲಾಖೆ, ಬೆಂಗಳೂರು ಅವರು ಮೇಲಧಿಕಾರಿಯಾಗಿದ್ದಾರೆ.

## ತೋಟಗಾರಿಕೆ ಇಲಾಖೆ

ಹೂವು, ತರಕಾರಿ, ಹಣ್ಣು ಮತ್ತಿತರ ತೋಟಗಾರಿಕಾ ಬೆಳೆಗಳನ್ನು ಮತ್ತು ಅಲಂಕಾರಿಕ ಗಿಡಗಳನ್ನು ಬೆಳೆಸುವ ಸಂಬಂಧದ ಮಾಹಿತಿ, ಮಾರ್ಗದರ್ಶನ ಹಾಗೂ ತಾಂತ್ರಿಕ ನೆರವನ್ನು ರೈತರು ಹಾಗೂ ಆಸಕ್ತ ಸಾರ್ವಜನಿಕರಿಗೆ ಒದಗಿಸುವುದು ಮೊದಲಾದ ಉದ್ದೇಶಗಳಿಂದ ತೋಟಗಾರಿಕೆ ಇಲಾಖೆಯ ಜಿಲ್ಲಾ ಕಚೇರಿಯು ೧೯೬೩ರಿಂದ ಮಂಗಳೂರಿನಲ್ಲಿ ಕಾರ್ಯನಿರ್ವಹಿಸುತ್ತಿದೆ. ಈ ಕಚೇರಿಯ ಮುಖ್ಯಸ್ಥರ ಹುದ್ದೆಯ ಹೆಸರು ಜಿಲ್ಲಾ ತೋಟಗಾರಿಕಾ ಅಧಿಕಾರಿ ಎಂದು ಇದ್ದದ್ದು, ೧೯೮೯ರಿಂದ ತೋಟಗಾರಿಕಾ ಉಪ ನಿರ್ದೇಶಕರು ಎಂದು ಬದಲಾವಣೆಗೊಂಡಿರುತ್ತದೆ. ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರ ಹೊಂದಿರುವ ಉಪನಿರ್ದೇಶಕರಿಗೆ ಕೇಂದ್ರಸ್ಥಾನ ಸಹಾಯಕ, ತಾಂತ್ರಿಕ ಸಹಾಯಕರು, ಸಹಾಯಕ ಸಾಂಖ್ಯಿಕ ಅಧಿಕಾರಿ, ಅಧೀಕ್ಷಕ, ತೋಟಗಾರಿಕಾ ಸಹಾಯಕರು ಮೊದಲಾದ ಅಧಿಕಾರಿ, ಸಿಬ್ಬಂದಿಗಳು ಕಚೇರಿಕಾರ್ಯದಲ್ಲಿ ನೆರವಾಗುತ್ತಾರೆ. ಈ ಕಚೇರಿಯ ಅಧೀನದಲ್ಲಿ ಒಂದು ರಾಜ್ಯವಲಯ ಕಚೇರಿ ಹಾಗೂ ಐದು ತಾಲೂಕು ಮಟ್ಟದ ಕಚೇರಿಗಳು ಕಾರ್ಯನಿರ್ವಹಿಸುತ್ತಿವೆ. ಜಿಲ್ಲೆಯ ವಿವಿಧ ತಾಲೂಕುಗಳ ಭೂ, ಹವಾಗುಣಗಳಿಗನುಗುಣವಾಗಿ ತೋಟಗಾರಿಕೆ ಬೆಳೆಗಳಾದ ಹಣ್ಣಿನ, ಪ್ಲಾಂಟೇಶನ್, ಸಾಂಬಾರು, ತರಕಾರಿ ಮತ್ತಿತರ ಸಸ್ಯಜಾತಿಯ ಬೀಜಗಳನ್ನು ಉತ್ಪಾದಿಸಿ ಬೆಳೆಗಾರರಿಗೆ ವಿತರಿಸುವುದು, ತೋಟಗಾರಿಕೆ ಪ್ರದರ್ಶನ, ಕ್ಷೇತ್ರೋತ್ಸವ ಮತ್ತು ವಿಚಾರ ಸಂಕಿರಣಗಳನ್ನು ನಡೆಸುವುದು, ಜಿಲ್ಲೆಯ ಉದ್ಯಾನವನಗಳು, ನರ್ಸರಿ ಮೊದಲಾದುವನ್ನು ವ್ಯವಸ್ಥಿತವಾಗಿ ನಿರ್ವಹಿಸುವುದು, ಆರ್ಥಿಕವಾಗಿ ಹಿಂದುಳಿದ ವರ್ಗಗಳ ಏಳಿಗೆಗಾಗಿ ವಿಶೇಷ ಘಟಕ ಯೋಜನೆ, ಬುಡಕಟ್ಟು ಜನಾಂಗದ ಉಪಯೋಜನೆಗಳನ್ನು ಹಾಗೂ ಗುಡ್ಡಗಾಡು ಪ್ರದೇಶಗಳ ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಗೊಳಿಸುವುದು ಮತ್ತಿತರ ಚಟುವಟಿಕೆಗಳನ್ನು ಈ ಕಚೇರಿಯು ನಡೆಸುತ್ತಿದೆ. ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಅವರು ಮೇಲಧಿಕಾರಿಯಾಗಿರುತ್ತಾರೆ.

## ದಕ್ಷಿಣ ಕನ್ನಡ ನಿರ್ಮಿತಿ ಕೇಂದ್ರ (ರಿ.)

ಕಡಿಮೆ ವೆಚ್ಚದಲ್ಲಿ ಕಟ್ಟಡ ಸಾಮಗ್ರಿಗಳನ್ನು ತಯಾರಿಸಿಕೊಡುವ ಹಾಗೂ ಪರಿಸರಕ್ಕೆ ಧಕ್ಕೆಯಾಗದಂತಹ ಆಧುನಿಕ ತಂತ್ರಜ್ಞಾನ ಅಳವಡಿಸಿಕೊಂಡು ಸುಲಭ ವೆಚ್ಚದಲ್ಲಿ ಮನೆಗಳನ್ನು ನಿರ್ಮಿಸುವ ಉದ್ದೇಶದ ಜಿಲ್ಲಾ ನಿರ್ಮಿತಿ ಕೇಂದ್ರವು ಸುರತ್ಕಲ್‌ನಲ್ಲಿ ೧೯೯೦ರಿಂದ ಕಾರ್ಯನಿರ್ವಹಿಸುತ್ತಿದೆ. ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಕಾರ್ಯವ್ಯಾಪ್ತಿ ಹೊಂದಿರುವ ಯೋಜನಾ ವ್ಯವಸ್ಥಾಪಕ ಈ ಕಛೇರಿಯ ಮುಖ್ಯಸ್ಥರಾಗಿದ್ದು, ಅವರಿಗೆ ಸಹಾಯಕರಾಗಿ ಕಿರಿಯ ಅಭಿಯಂತರ, ಮೇಲ್ವಿಚಾರಕರು, ಅಕೌಂಟೆಂಟ್ ಮೊದಲಾದ ಇತರ ಸಿಬ್ಬಂದಿವರ್ಗವಿದೆ. ನಿರ್ಮಿತಿ ಕೇಂದ್ರದ ಮೂಲಕ ಗೃಹನಿರ್ಮಾಣ ಮಾಡಬಯಸುವ ಸಾರ್ವಜನಿಕರಿಗೆ ಪ್ರಸಕ್ತ ಮಾರುಕಟ್ಟೆ ದರದ ಅನ್ವಯ ಮನೆಯ ಯೋಜನೆ, ವಿನ್ಯಾಸ ಮತ್ತು ನಿರ್ಮಾಣಗಳ ವೆಚ್ಚವನ್ನು ನಿರ್ಧರಿಸಿಕೊಡುವುದು, ಮನೆಯ ನಕ್ಷೆ ಮತ್ತು ಅಂದಾಜು ಪಟ್ಟಿಯನ್ನು ತಾಂತ್ರಿಕವಾಗಿ

ಪರಿಶೀಲಿಸಿ ಮಂಜೂರು ಮಾಡಿಕೊಡುವುದು, ಖಾಸಗಿ ಮನೆಗಳ ನಿರ್ಮಾಣ, ಸರಕಾರಿ ಇಲಾಖೆಗಳು ನೀಡುವ ವಿವಿಧ ಕಾಮಗಾರಿಗಳ ನಿರ್ವಹಣೆ, ಕಟ್ಟಡ ನಿರ್ಮಾಣದಲ್ಲಿ ತರಬೇತಿ ನೀಡುವುದು ಮೊದಲಾದ ಚಟುವಟಿಕೆಗಳನ್ನು ಈ ಕಚೇರಿ ನಡೆಸುತ್ತಿದೆ. ನಿರ್ದೇಶಕ, ಕಾರ್ನಿಕ್, ಬೆಂಗಳೂರು–ಅವರು ಮೇಲಧಿಕಾರಿಯಾಗಿರುತ್ತಾರೆ.

## ದಕ್ಷಿಣ ಕನ್ನಡ ಸಹಕಾರಿ ಹಾಲು ಉತ್ಪಾದಕರ ಒಕ್ಕೂಟ ನಿಯಮಿತ

ಪಶು ಸಂಗೋಪನೆ ಇಲಾಖೆಗೆ ಸೇರಿದ ದಕ್ಷಿಣ ಕನ್ನಡ ಸಹಕಾರಿ ಹಾಲು ಉತ್ಪಾದಕರ ಒಕ್ಕೂಟ ನಿಗಮದ ಕಚೇರಿಯು ೧೯೮೬ರಿಂದ ಮಂಗಳೂರಿನಲ್ಲಿ ಕಾರ್ಯನಿರ್ವಹಿಸುತ್ತಿದೆ. ವ್ಯವಸ್ಥಾಪಕ ನಿರ್ದೇಶಕ ಅವರು ಈ ಕಚೇರಿಯ ಮುಖ್ಯಸ್ಥರಾಗಿದ್ದು ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ವ್ಯಾಪ್ತಿ ಆಡಳಿತಾಧಿಕಾರ ಹೊಂದಿರುತ್ತಾರೆ. ಒಕ್ಕೂಟದ ಸದಸ್ಯ ಸಂಘಗಳ ಉತ್ಪಾದಕರು ಉತ್ತಮ ಗುಣಮಟ್ಟದ ಹಾಲನ್ನು ಉತ್ಪಾದಿಸಲು ಪೂರಕವಾದ ಸೌಲಭ್ಯಗಳನ್ನು ಒಕ್ಕೂಟದ ಆರ್ಥಿಕ ಪರಿಸ್ಥಿತಿಗೆ ಅನುಗುಣವಾಗಿ ವಿಸ್ತರಿಸುವುದು ಹಾಗೂ ಗ್ರಾಹಕರಿಗೆ ನಿರಂತರವಾಗಿ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಒದಗಿಸುವುದು ಈ ಒಕ್ಕೂಟದ ಮುಖ್ಯ ಧ್ಯೇಯೋದ್ದೇಶವಾಗಿರುತ್ತದೆ. ಅದರ ಅನ್ವಯ ಹಾಲಿನ ಶೇಖರಣೆ ಮತ್ತು ಮಾರಾಟದ ಪ್ರಮಾಣವನ್ನು ಹೆಚ್ಚಿಸುವುದೇ ಮೊದಲಾದ ವಿವಿಧ ಅಭಿವೃದ್ಧಿ ಚಟುವಟಿಕೆಗಳನ್ನು ಈ ಕಛೇರಿಯು ಹಮ್ಮಿಕೊಂಡಿರುತ್ತದೆ.  ಮಂಗಳೂರು ಕೇಂದ್ರಡೈರಿ, ಮಣಿಪಾಲಡೈರಿ ಹಾಗೂ ಪುತ್ತೂರು ಶೀಥಲೀಕರಣ ಕೇಂದ್ರಗಳು ಈ ಕಛೇರಿಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿವೆ.

## ನೋಂದಣಿ ಮತ್ತು ಮುದ್ರಾಂಕ ಇಲಾಖೆ

ಆಸ್ತಿಗಳು, ವಿವಾಹಗಳು ಹಾಗೂ ಸಂಘ ಸಂಸ್ಥೆಗಳನ್ನು ನೋಂದಣಿ ಮಾಡುವ ಮುಖ್ಯ ಧ್ಯೇಯೋದ್ದೇಶಗಳನ್ನು ಹೊಂದಿರುವ ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಜಿಲ್ಲಾ ಕಚೇರಿಯ ಮುಖ್ಯಸ್ಥರಾಗಿ ಜಿಲ್ಲಾ ನೋಂದಣಾಧಿಕಾರಿ ಇದ್ದು, ಅವರು ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರ ಹೊಂದಿರುತ್ತಾರೆ.  ಕಚೇರಿಯಲ್ಲಿ ಅವರ ನೆರವಿಗೆ ಪ್ರಥಮ ಹಾಗೂ ದ್ವಿತೀಯ ದರ್ಜೆ ಸಹಾಯಕರು ಮತ್ತಿತರ ಸಿಬ್ಬಂದಿ ಇದ್ದಾರೆ. ಮಂಗಳೂರು ನಗರ ವ್ಯಾಪ್ತಿಯ ಕೇಂದ್ರೀಯ ಉಪ ನೋಂದಣಾಧಿಕಾರಿಯಲ್ಲದೆ, ಮಂಗಳೂರು, ಮುಲ್ಕಿ, ಬಂಟ್ವಾಳ, ಪುತ್ತೂರು, ಬೆಳ್ತಂಗಡಿ, ಸುಳ್ಯ, ವಿಟ್ಲ, ಮೂಡಬಿದ್ರೆಗಳಲ್ಲಿನ ಉಪನೋಂದಣಾಧಿಕಾರಿ ಕಛೇರಿಗಳು ಈ ಕಚೇರಿಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿವೆ.  ಭಾರತೀಯ ಮುದ್ರಾಂಕ ಕಾಯಿದೆ, ಕರ್ನಾಟಕ ಮುದ್ರಾಂಕ ಕಾಯಿದೆ, ಭಾರತೀಯ ಪಾಲುದಾರಿಕೆ ಅಧಿನಿಯಮ, ಹಿಂದೂ ವಿವಾಹ ಕಾಯಿದೆ ಮೊದಲಾದ ನಿಯಮ ಅಧಿನಿಯಮಗಳನ್ನು ಈ ಕಚೇರಿಯು ಅನುಸರಿಸುತ್ತಿವೆ. ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು, ಬೆಂಗಳೂರು ಅವರು ಮೇಲಧಿಕಾರಿಯಾಗಿರುತ್ತಾರೆ (ವಿವರಕ್ಕೆ ಕಂದಾಯ ಆಡಳಿತ ಮತ್ತು ರಾಜಸ್ವ ಅಧ್ಯಾಯ ನೋಡಿ).

## ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ

ಜಾನುವಾರುಗಳಿಗೆ ಸಾಂಕ್ರಾಮಿಕ ರೋಗ ತಗುಲದಂತೆ ಚುಚ್ಚುಮದ್ದು ನೀಡುವುದು, ರೋಗಗ್ರಸ್ಥ ಸಾಕುಪ್ರಾಣಿಗಳಿಗೆ ಚಿಕಿತ್ಸೆ ನೀಡುವುದು, ಮಿಶ್ರತಳಿಯ ಜಾನುವಾರುಗಳನ್ನು ಅಭಿವೃದ್ಧಿಪಡಿಸುವುದು, ಕಾರ್ಯಕ್ರಮಗಳ ಫಲಾನುಭವಿಗಳಿಗೆ ಸಹಾಯಧನ ಮಂಜೂರು ಹಾಗೂ ತಾಂತ್ರಿಕ ವಿಷಯಗಳಲ್ಲಿ ಮಾರ್ಗದರ್ಶನ ನೀಡುವುದು ಮೊದಲಾದ ಉದ್ದೇಶಗಳಿಂದ ಪಶುಪಾಲನಾ ಇಲಾಖಾ ಕಚೇರಿಯು ಮಂಗಳೂರಿನಲ್ಲಿ ೧೯೬೬ರಿಂದ ಕಾರ್ಯನಿರ್ವಹಿಸುತ್ತಿದೆ. ಈ ಕಛೇರಿಯ ಮುಖ್ಯಸ್ಥರ ಹುದ್ದೆಯ ಹೆಸರು ೧೯೬೬ರಲ್ಲಿ ಜಿಲ್ಲಾ ಪಶುಸಂಗೋಪನಾ ಅಧಿಕಾರಿ ಎಂದು ಇದ್ದು, ೧೯೭೭ರಿಂದ ಹಿರಿಯ ಸಹಾಯಕ ನಿರ್ದೇಶಕ ಹಾಗೂ ೧೯೮೬ರಿಂದ ಉಪನಿರ್ದೇಶಕ ಎಂದು ಬದಲಾಗಿರುತ್ತದೆ. ಈ ಕಛೇರಿಯ ಕಾರ್ಯಗಳಲ್ಲಿ ಸಹಾಯಕ ನಿರ್ದೇಶಕ, ಪಶುವೈದ್ಯಾಧಿಕಾರಿಗಳು, ವಿಸ್ತರಣಾಧಿಕಾರಿ, ಪಶುವೈದ್ಯಕೀಯ ಮೇಲ್ವಿಚಾರಕರು ಮೊದಲಾದ ಅಧಿಕಾರಿ, ಸಿಬ್ಬಂದಿ ವರ್ಗ ನೆರವಾಗುತ್ತಿದೆ. ಜಿಲ್ಲಾ ವ್ಯಾಪ್ತಿ ಅಧಿಕಾರವನ್ನು ಹೊಂದಿದ ಈ ಕಛೇರಿಯು ಹಸಿರು ಮೇವು ಬೆಳೆಸಲು ರೈತರಿಗೆ ಪ್ರೋತ್ಸಾಹ ಹಾಗೂ ತಾಂತ್ರಿಕ ಸಲಹೆ ನೀಡುವುದು, ಮಿಶ್ರತಳಿ ಹಂದಿ ಸಾಕಾಣಿಕೆ, ಗಿರಿರಾಜ ಕೋಳಿ ಸರಬರಾಜು ಮೊದಲಾದ ಕಾರ್ಯಚಟುವಟಿಕೆಗಳನ್ನು ನಡೆಸುತ್ತಿದೆ. ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ, ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್, ಮಂಗಳೂರು ಅವರು ಮೇಲಧಿಕಾರಿಯಾಗಿರುತ್ತಾರೆ.

## ಪ್ರವಾಸೋದ್ಯಮ ಇಲಾಖೆ

ಜಿಲ್ಲೆಯ ವಿವಿಧ ಪ್ರವಾಸಿ ತಾಣಗಳನ್ನು ಅಭಿವೃದ್ಧಿಪಡಿಸುವುದು, ಪ್ರವಾಸಿಗಳಿಗೆ ಅವುಗಳ ಮಾಹಿತಿ ಒದಗಿಸುವುದು, ಆ ಮೂಲಕ ಪ್ರವಾಸೋದ್ಯಮವನ್ನು ಉತ್ತೇಜಿಸುವುದು ಮೊದಲಾದ ಧ್ಯೇಯೋದ್ದೇಶಗಳಿಂದ ಪ್ರವಾಸೋದ್ಯಮ ಇಲಾಖಾ ಕಛೇರಿಯು ಮಂಗಳೂರಿನಲ್ಲಿ ೧೯೮೫ರಿಂದ ಕಾರ್ಯನಿರ್ವಹಿಸುತ್ತಿದೆ. ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರ ಹೊಂದಿರುವ ಪ್ರವಾಸಿ ಅಧಿಕಾರಿಯು ಈ ಕಚೇರಿಯ ಮುಖ್ಯಸ್ಥರಾಗಿದ್ದಾರೆ. ಪ್ರಥಮ ದರ್ಜೆ ಸಹಾಯಕ, ಪ್ರವಾಸಿ ಪ್ರವರ್ತಕ, ಎಣಿಕೆದಾರ, ಕೇರ್‌ಟೇಕರ್ ಮೊದಲಾದ ಸಿಬ್ಬಂದಿಯು ಕಚೇರಿ ಕಾರ್ಯದಲ್ಲಿ ಅವರಿಗೆ ನೆರವಾಗುತ್ತದೆ. ಜಿಲ್ಲಾಡಳಿತದ ನೆರವಿನಲ್ಲಿ ಇಲಾಖೆಯು ಪಣಂಬೂರು ಬೀಚ್ ಅಭಿವೃದ್ಧಿ ಯೋಜನೆ, ವಾಮಂಜೂರಿನ ಪಿಲಿಕುಳ ನಿಸರ್ಗಧಾಮದಲ್ಲಿ ಪರಂಪರೆ ಗ್ರಾಮ, ಆಯುರ್ವೇದ ಹೆಲ್ತ್ ಸೆಂಟರ್ ನಿರ್ಮಾಣ ಯೋಜನೆ ಮೊದಲಾದವುಗಳನ್ನು ಕಾರ್ಯರೂಪಕ್ಕೆ ತರುತ್ತಿದೆ. ಸಹಾಯಕ ನಿರ್ದೇಶಕ, ಉಡುಪಿ ಅವರು ಮೇಲಧಿಕಾರಿಯಾಗಿದ್ದಾರೆ.

## ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ

ರಾಜ್ಯಗಳ ಪುನರ್ ರಚನೆಗೆ ಮೊದಲು ಬಂದರು ವಿಶ್ವಸ್ಥ ಮಂಡಳಿ, ಮಂಗಳೂರು–ಎಂಬ ಹೆಸರಿನಲ್ಲಿದ್ದ ಈ ಕಚೇರಿಯು ೧೯೮೦ರಲ್ಲಿ ರಾಜ್ಯ ಸರಕಾರದ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಗೆ ಸೇರಿದ ಮೇಲೆ ಬಂದರು ಕಚೇರಿ ಹೆಸರಿನಲ್ಲಿ ಮಂಗಳೂರಿನಲ್ಲಿ ಕಾರ್ಯನಿರ್ವಹಿಸುತ್ತಿದೆ. ಬಂದರು ಅಧಿಕಾರಿ ಈ ಕಚೇರಿಯ ಮುಖ್ಯಸ್ಥರಾಗಿದ್ದಾರೆ. ಮೀನುಗಾರಿಕಾ ಬೋಟುಗಳು, ಹಾಯಿದೋಣಿಗಳು ಮತ್ತು ಮಂಜಿಗಳ ನೋಂದಣಿ ಮಾಡುವುದು, ಮಂಜಿಗಳು ಮತ್ತು ಹಡಗುಗಳ ಮೂಲಕ ಲಕ್ಷದ್ವೀಪ, ಮಿನಿಕಾಯ್ ಮತ್ತಿತರ ದ್ವೀಪಗಳಿಗೆ ಸರಕುಗಳ ಆಮದು, ರಫ್ತುಗಳಿಗೆ ಅವಕಾಶ ಮಾಡಿಕೊಡುವುದು, ದ್ವೀಪಗಳಲ್ಲಿನ ಜನರ ಸಂಚಾರಕ್ಕೆ ಪ್ರಯಾಣಿಕರ ಹಡಗುಗಳ ವ್ಯವಸ್ಥೆ ಮಾಡುವುದು ಮೊದಲಾದ ಕಾರ್ಯಗಳನ್ನು ಈ ಕಚೇರಿ ನಿರ್ವಹಿಸುತ್ತಿದೆ. ಪ್ರಸ್ತುತ, ಈ ಬಂದರಿನ ಎರಡನೆಯ ಹಂತದ ದಕ್ಕೆ ನಿರ್ಮಾಣ ಕಾಮಗಾರಿಯು ಪ್ರಗತಿಯಲ್ಲಿದೆ. ಭಾರತೀಯ ಬಂದರುಗಳ ಕಾಯಿದೆ–೧೯೦೮, ಕರ್ನಾಟಕ ಬಂದರುಗಳ ನೌಕಾನಿಯಮಗಳು ೧೯೬೩, ವ್ಯಾಪಾರಿ ನೌಕಾ (ಹಾಯಿ ಹಡಗುಗಳ ಧಾರಣೆ ಪ್ರಮಾಣ–ಅಳತೆಯ)ನಿಯಮ ೧೯೬೦ ಮೊದಲಾದ ಕಾನೂನು ಮತ್ತು ವಿಧಾಯಕಗಳನ್ನು ಈ ಕಚೇರಿಯು ತನ್ನ ಕೆಲಸಗಳಲ್ಲಿ ಅನ್ವಯಿಸುತ್ತದೆ. ನಿರ್ದೇಶಕ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಕಾರವಾರ ಅವರು ಮೇಲಧಿಕಾರಿಯಾಗಿದ್ದಾರೆ.

## ಭೂಮಾಪನ ಇಲಾಖೆ

ಟಿಪ್ಪಣಿ, ನಕಾಶೆ, ಸ್ಕೆಚ್, ಗ್ರಾಮನಕಾಶೆ, ಪಕ್ಕಾಪುಸ್ತಕ, ಅಟ್ಲಾಸ್ ಪುಸ್ತಕ ಮೊದಲಾದ ಭೂದಾಖಲೆಗಳಿಗೆ ಸಂಬಂಧಿಸಿದ ಕಾರ್ಯಗಳನ್ನು ನಿರ್ವಹಿಸುವ ದೃಷ್ಟಿಯಿಂದ ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆಯನ್ನು ಪ್ರತ್ಯೇಕ ಇಲಾಖೆಯಾಗಿ ರೂಪಿಸಲಾಗಿದ್ದಿತು. ಆದರೆ, ಒಂದೇ ಸೂರಿನಡಿ, ಒಬ್ಬರೇ ಅಧಿಕಾರಿಯಿಂದ ಈ ದಾಖಲೆಗಳು ಸಾರ್ವಜನಿಕರಿಗೆ ಲಭ್ಯವಾಗಲಿ ಎಂಬ ಆಶಯದಿಂದ ಕರ್ನಾಟಕ ಆಡಳಿತ ಸುಧಾರಣಾ ಆಯೋಗದ ಶಿಫಾರಸ್ಸಿನ ಅನ್ವಯ ಈ ಇಲಾಖೆಯನ್ನು ಕಂದಾಯ ಇಲಾಖೆಯೊಂದಿಗೆ ಕಾರ್ಯವಿಲೀನಗೊಳಿಸಲಾಗಿದೆ. ಇದು ಸರಕಾರದ ಆದೇಶ ಸಂಖ್ಯೆ:ಕಂಇ:ಭೂದಾಸ:೨೦೦೨, ದಿನಾಂಕ ೨೧–೪–೨೦೦೫ರಂತೆ ದಿನಾಂಕ ೦೧–೦೫–೨೦೦೫ರಿಂದ ಜಾರಿಗೆ ಬಂದಿರುತ್ತದೆ. ಹೀಗಾಗಿ, ಮಂಗಳೂರಿನಲ್ಲಿದ್ದ ಮಂಗಳೂರು ವಿಭಾಗದ ಭೂದಾಖಲೆಗಳ ಉಪನಿರ್ದೇಶಕರ ಕಚೇರಿಯು ದಕ್ಷಿಣ ಕನ್ನಡ ಜಿಲ್ಲಾಧಿಕಾರಿಯವರ ಕಚೇರಿಯಲ್ಲಿ ಭೂಮಾಪನ ತಾಂತ್ರಿಕ ಸಹಾಯಕರ ಶಾಖೆಯಾಗಿ ಕಾರ್ಯನಿರ್ವಹಿಸುತ್ತಿದೆ. ಈ ಶಾಖೆಯ ಮುಖ್ಯಸ್ಥರಾಗಿರುವ ಭೂಮಾಪನ ತಾಂತ್ರಿಕ ಸಹಾಯಕ ಹಾಗೂ ಪದನಿಮಿತ್ತ ಭೂದಾಖಲೆಗಳ ಉಪನಿರ್ದೇಶಕರು ತಾಲೂಕು ಹಾಗೂ ಜಿಲ್ಲೆಗಳಲ್ಲಿ ಪೋಡಿ ಕೆಲಸಗಳ ವಿಲೇವಾರಿಗೆ ಸಂಬಂಧಿಸಿದಂತೆ ಸಮನ್ವಯ ಮೇಲ್ವಿಚಾರಣೆ ಮತ್ತು ಭೂಮಾಪನ ಇಲಾಖೆಯ ನಿರ್ದೇಶಕರು ಹಾಗೂ ಜಿಲ್ಲಾಧಿಕಾರಿ ಅವರಿಗೆ ವರದಿ ಮಾಡುವ ಪ್ರಾಧಿಕಾರಿ ಆಗಿರುತ್ತಾರೆ. ಕಚೇರಿ ಕಾರ್ಯದಲ್ಲಿ ಇವರಿಗೆ ನೆರವಾಗಲು ಭೂದಾಖಲೆಗಳ ಸಹಾಯಕ ನಿರ್ದೇಶಕ, ಎರಡನೇ ದರ್ಜೆ ಭೂಮಾಪಕರು ಮೊದಲಾದ ಇತರ ಸಿಬ್ಬಂದಿ ವರ್ಗವಿದೆ.

## ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ

ಕರ್ನಾಟಕ ಸರಕಾರದ ನಗರಾಭಿವೃದ್ಧಿ ಇಲಾಖೆಗೆ ಸೇರಿದ ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರವು ೧೯೮೮ರಿಂದ ಮಂಗಳೂರಿನಲ್ಲಿ ಪ್ರಾರಂಭವಾಗಿರುತ್ತದೆ. ಸರಕಾರದಿಂದ ನೇಮಕವಾಗುವ (ಅಧಿಕಾರೇತರ) ಅಧ್ಯಕ್ಷರು ಈ ಪ್ರಾಧಿಕಾರದ ಮುಖ್ಯಸ್ಥರಾಗಿರುತ್ತಾರೆ. ಆಯುಕ್ತರು

ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಾರೆ. ಭೂಸ್ವಾಧೀನ ಅಧಿಕಾರಿ, ಸಹಾಯಕ ಕಾರ್ಯಕಾರಿ ಅಭಿಯಂತರ, ನಗರ ಯೋಜನಾ ಪರ್ಯಾವೇಕ್ಷಕ ಮೊದಲಾದವರು ಇವರ ನೆರವಿಗಿರುತ್ತಾರೆ. ಮಂಗಳೂರು ಮಹಾ ನಗರಪಾಲಿಕೆ, ಪುರಸಭೆಗಳು ಮತ್ತು ಇತರ ಗ್ರಾಮಗಳು ಈ ಪ್ರಾಧಿಕಾರದ ವ್ಯಾಪ್ತಿಗೆ ಒಳಪಡುತ್ತವೆ. ತನ್ನ ಕಾರ್ಯವ್ಯಾಪ್ತಿಯಲ್ಲಿ ಬರುವ ಪ್ರದೇಶಕ್ಕೆ ಮಾಸ್ಟರ್‌ಪ್ಲಾನ್ ತಯಾರಿಸುವುದು, ಅನುಮೋದಿತ ಮಾಸ್ಟರ್‌ಪ್ಲಾನ್ ಮತ್ತು ನಿಯಮಾವಳಿಗಳಂತೆ ಯೋಜನಾಬದ್ಧವಾಗಿ ನಗರ ನಿರ್ಮಾಣವಾಗುವ ರೀತಿಯಲ್ಲಿ ಕಟ್ಟಡಗಳ ನಿರ್ಮಾಣವನ್ನು ನಿಯಂತ್ರಿಸುವುದು. ಭೂಪರಿವರ್ತನೆಗೆ ತಾಂತ್ರಿಕ ಸಲಹೆ ನೀಡುವುದು, ವಸತಿಹೀನರಿಗೆ ನಿವೇಶನ ನೀಡುವ ಸಂಬಂಧ ಖಾಲಿ ಜಮೀನನ್ನು ಸ್ವಾಧೀನ ಮಾಡಿಕೊಳ್ಳುವುದು ಮತ್ತಿತರ ಕಾರ್ಯಗಳನ್ನು ಈ ಕಚೇರಿ ನಿರ್ವಹಿಸುತ್ತದೆ. ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ ೧೯೮೭, ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ನಿವೇಶನ ಹಂಚಿಕೆ) ನಿಯಮ ೧೯೯೧, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯಿದೆ ೧೯೬೧ ಮತ್ತು ಕರ್ನಾಟಕ ಯೋಜನಾ ಪ್ರಾಧಿಕಾರ ನಿಯಮ ೧೯೬೫ ಮೊದಲಾದ ಅಧಿನಿಯಮ ಮತ್ತು ನಿಯಮಗಳನ್ನು ಪ್ರಾಧಿಕಾರವು ಅನುಸರಿಸುತ್ತದೆ. ಸರಕಾರದ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು ಅವರು ಮೇಲಧಿಕಾರಿಯಾಗಿರುತ್ತಾರೆ.

## ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಮಂಗಳೂರಿನಲ್ಲಿ ೧೯೮೧ರಿಂದ ಕಾರ್ಯನಿರ್ವಹಿಸುತ್ತಿರುವ ಈ ಕಚೇರಿಯ ಆಗಿನ ಮುಖ್ಯಸ್ಥರ ಹುದ್ದೆಯು ಸಹಾಯಕ ನಿರ್ದೇಶಕ ಎಂದು ಇದ್ದದ್ದು ೨೦೦೩ರಿಂದ ಉಪನಿರ್ದೇಶಕ ಎಂದು ಬದಲಾವಣೆ ಹೊಂದಿರುತ್ತದೆ. ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರ ಹೊಂದಿರುವ ಈ ಕಚೇರಿಯಲ್ಲಿ ಉಪನಿರ್ದೇಶಕರೊಂದಿಗೆ ಜಿಲ್ಲಾ ನಿರೂಪಣಾಧಿಕಾರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಧಿಕಾರಿ, ಅಧೀಕ್ಷಕರು, ವಿಶೇಷ ಪೌಷ್ಟಿಕ ಆಹಾರ ನಿರೀಕ್ಷಕ, ಸಮಾಜ ಕಲ್ಯಾಣ ನಿರೀಕ್ಷಕ, ಅಂಗವಿಕಲರ ಕಲ್ಯಾಣಾಧಿಕಾರಿ ಮೊದಲಾದ ಇತರ ಅಧಿಕಾರಿ, ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ. ಮಂಗಳೂರು ನಗರ ಮತ್ತು ಗ್ರಾಮಾಂತರ ಹಾಗೂ ಪುತ್ತೂರು, ಬೆಳ್ತಂಗಡಿ, ಸುಳ್ಯ ಮತ್ತು ಬಂಟ್ವಾಳಗಳಲ್ಲಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಇದ್ದು, ಆಯಾ ತಾಲೂಕುಗಳ ವ್ಯಾಪ್ತಿಯಲ್ಲಿ ಅವರು ಕಾರ್ಯನಿರ್ವಹಿಸುತ್ತಾರೆ. ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿಗಾಗಿ ಶ್ರಮಿಸುವುದು ಈ ಇಲಾಖೆಯ ಮುಖ್ಯ ಧ್ಯೇಯವಾಗಿದೆ. ಅದರ ಅನ್ವಯ ಸಮಗ್ರ ಬಾಲವಿಕಾಸ ಯೋಜನೆ, ಸ್ತ್ರೀಶಕ್ತಿ ಯೋಜನೆ, ಮಹಿಳಾ ಅಭಿವೃದ್ಧಿ ಯೋಜನೆ, ಅಂಗವಿಕಲರ ಕಲ್ಯಾಣ ಯೋಜನೆ ಮೊದಲಾದ ಯೋಜನೆಗಳನ್ನು ಹಾಗೂ ಅಭಿವೃದ್ಧಿ ಚಟುವಟಿಕೆಗಳನ್ನು ಈ ಕಚೇರಿ ಕಾರ್ಯಗತಗೊಳಿಸುತ್ತಿದೆ. ಮುಖ್ಯ ಕಾರ್ಯನಿರ್ವಹಣಾಧಿಕಾರಿ, ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್, ಮಂಗಳೂರು ಅವರು ಮೇಲಧಿಕಾರಿಯಾಗಿರುತ್ತಾರೆ.

## ಮೀನುಗಾರಿಕೆ ಇಲಾಖೆ

ಮಂಗಳೂರಿನಲ್ಲಿರುವ ಮೀನುಗಾರಿಕೆ ಉಪನಿರ್ದೇಶಕರ ಕಚೇರಿಯು ವಿಭಾಗ ಮಟ್ಟದ್ದಾಗಿದ್ದು, ದಕ್ಷಿಣ ಕನ್ನಡ ಮತ್ತು ಉಡುಪಿ ಈ ಎರಡೂ ಜಿಲ್ಲೆಗಳ ಅಧಿಕಾರ ವ್ಯಾಪ್ತಿ ಹೊಂದಿರುತ್ತದೆ. ಉಪನಿರ್ದೇಶಕರಿಗೆ ಕಚೇರಿ ಕಾರ್ಯಗಳಲ್ಲಿ ನೆರವಾಗಲು ಆಡಳಿತ ಮತ್ತು ತಾಂತ್ರಿಕ ವಿಷಯಗಳಿಗೆ ಸಂಬಂಧಿಸಿ ಮೀನುಗಾರಿಕೆ ಸಹಾಯಕ ನಿರ್ದೇಶಕರು, ಅಧೀಕ್ಷರು, ಸಹಾಯಕ ಸಾಂಖ್ಯಿಕ ಅಧಿಕಾರಿ, ಪ್ರಥಮ ದರ್ಜೆ ಸಹಾಯಕ ಮೊದಲಾದ ಅಧಿಕಾರಿ, ಸಿಬ್ಬಂದಿಗಳಿದ್ದಾರೆ.

ಜಿಲ್ಲಾ ಹಾಗೂ ವಲಯ ಮಟ್ಟದಲ್ಲಿ ಮೀನುಗಾರ ಸಮುದಾಯದ ಅಭಿವೃದ್ಧಿ, ಮೀನುಗಾರಿಕೆಗೆ ಸಂಬಂಧಿಸಿದ ವಿವಿಧ ಅಭಿವೃದ್ಧಿ ಕಾರ್ಯಗಳ ಅನುಷ್ಠಾನದ ಉಸ್ತುವಾರಿ ಹಾಗೂ ಆಡಳಿತ ನಿಯಂತ್ರಣವು ಈ ಕಚೇರಿಯ ಪ್ರಮುಖ ಧ್ಯೇಯೋದ್ದೇಶವಾಗಿದ್ದು, ಅದಕ್ಕೆ ಪೂರಕವಾಗಿ ಮೀನುಮರಿ ಪಾಲನೆ ಮತ್ತು ಹಂಚಿಕೆ, ಮೀನು ಮಾರುಕಟ್ಟೆ ನಿರ್ಮಾಣಕ್ಕೆ ಸಹಾಯಧನ ನೀಡಿಕೆ, ಸಿಗಡಿ ಕೃಷಿ ಅಭಿವೃದ್ಧಿಗೆ ನೆರವು ಮೊದಲಾದ ಜಿಲ್ಲಾ ವಲಯ ಯೋಜನೆಗಳು, ಮೀನುಗಾರರಿಗೆ ಮನೆಗಳ ನಿರ್ಮಿತಿಗಾಗಿ ಮತ್ಸ್ಯಾಶ್ರಯ ಯೋಜನೆಯಡಿ ಸಹಾಯಧನ ನೀಡಿಕೆ, ಯಾಂತ್ರೀಕೃತ ಮೀನುಗಾರಿಕೆ ದೋಣಿಗಳು ಬಳಸುವ ಡೀಸೆಲ್ ಮೇಲಿನ ರಾಜ್ಯ ಮಾರಾಟಕರ ಮಾಫಿ ಯೋಜನೆ ಮೊದಲಾದ ರಾಜ್ಯ ವಲಯ ಯೋಜನೆಗಳು, ಸಾಂಪ್ರದಾಯಿಕ ನಾಡದೋಣಿಗಳನ್ನು ಯಾಂತ್ರೀಕರಿಸಲು ಸಹಾಯಧನ, ಮೀನುಗಾರರ ಅಪಘಾತ ಗುಂಪು ವಿಮಾ ಯೋಜನೆ ಮೊದಲಾದ ಕೇಂದ್ರ ಪುರಸ್ಕೃತ ಯೋಜನೆಗಳನ್ನು ಈ ಕಚೇರಿಯು ಕಾರ್ಯರೂಪಕ್ಕೆ ತರುತ್ತಿದೆ. ಮೀನುಗಾರಿಕೆ ನಿರ್ದೇಶಕ, ಬೆಂಗಳೂರು ಅವರು ಮೇಲಧಿಕಾರಿಯಾಗಿರುತ್ತಾರೆ.

## ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ

ಯುವಜನರಲ್ಲಿ ಕ್ರೀಡಾಸಕ್ತಿ ಬೆಳೆಸುವುದು, ಕ್ರೀಡಾ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುವ ಮೂಲಕ ಆರೋಗ್ಯ ಪೂರ್ಣ ಯುವಶಕ್ತಿಯನ್ನು ರೂಪಿಸುವ ಧ್ಯೇಯದೊಂದಿಗೆ ಮಂಗಳೂರಿನಲ್ಲಿ ೧೯೭೫ರಿಂದ ಈ ಇಲಾಖಾ ಕಛೇರಿ ಕಾರ್ಯನಿರ್ವಹಿಸುತ್ತಿದೆ. ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರ ಹೊಂದಿರುವ ಜಿಲ್ಲಾ ಯುವಜನಸೇವಾ ಮತ್ತು ಕ್ರೀಡಾಧಿಕಾರಿ ಅವರು ಪ್ರಸ್ತುತ ಈ ಕಛೇರಿಯ ಮುಖ್ಯಸ್ಥರಾಗಿದ್ದು, ಇವರ ನೆರವಿಗೆ ಅಧೀಕ್ಷಕ, ದ್ವಿತೀಯ ದರ್ಜೆ ಸಹಾಯಕ ಮತ್ತಿತರ ಸಿಬ್ಬಂದಿ ಇದ್ದಾರೆ. ಜಿಲ್ಲೆಯಲ್ಲಿ ಯುವಕ ಸಂಘಗಳ ಕಟ್ಟಡಗಳಿಗೆ ಅನುದಾನ ನೀಡುವುದು, ಆಟದ ಮೈದಾನದ ಅಭಿವೃದ್ಧಿ, ಕ್ರೀಡಾ ತರಬೇತಿ ಶಿಬಿರ ಏರ್ಪಡಿಸುವುದು ಮೊದಲಾದ ಕಾರ್ಯಗಳನ್ನು ಈ ಕಛೇರಿ ನಡೆಸುತ್ತದೆ. ಆಯುಕ್ತರು, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ, ಬೆಂಗಳೂರು ಅವರು ಮೇಲಧಿಕಾರಿಯಾಗಿರುತ್ತಾರೆ.

## ಲೋಕ ಶಿಕ್ಷಣ ನಿರ್ದೇಶನಾಲಯ

ಜಿಲ್ಲೆಯಲ್ಲಿನ ೧೮ರಿಂದ ೫೫ವರ್ಷದ ವಯಸ್ಕರನ್ನು ಗುರುತಿಸಿ, ಅವರನ್ನು ಸಾಕ್ಷರತಾ ಆಂದೋಲನದೊಳಗೆ ತರುವ ಮೂಲಕ ಅವರಿಗೆ ಓದು–ಬರಹ ಕಲಿಸುವುದು, ಸಾಕ್ಷರೋತ್ತರ ಕಾರ್ಯಕ್ರಮಗಳನ್ನು ನಿಯೋಜಿಸುವುದು ಮೊದಲಾದ ಧ್ಯೇಯೋದ್ದಶಗಳಿಂದ ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿ ಅವರ ಕಚೇರಿಯು ಮಂಗಳೂರಿನಲ್ಲಿ ೧೯೮೮ರಿಂದ ಕಾರ್ಯಾರಂಭ ಮಾಡಿರುತ್ತದೆ. ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರ ಹೊಂದಿರುವ ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿ ಅವರಿಗೆ ನೆರವಾಗಲು ಕಾರ್ಯಕ್ರಮ ಸಹಾಯಕ, ದ್ವಿತೀಯ ದರ್ಜೆ ಸಹಾಯಕ ಮತ್ತಿತರ ಸಿಬ್ಬಂದಿ ಇದ್ದಾರೆ. ಮುಂದುವರಿದ ಶಿಕ್ಷಣ ಕಾರ್ಯಕ್ರಮದನ್ವಯ ವಿವಿಧ ಕಾರ್ಯಕ್ರಮಗಳನ್ನು ಈ ಕಚೇರಿಯು ನಿರ್ವಹಿಸುತ್ತದೆ. ನಿರ್ದೇಶಕರು, ಲೋಕಶಿಕ್ಷಣ ನಿರ್ದೇಶನಾಲಯ, ಬೆಂಗಳೂರು ಅವರು ಮೇಲಧಿಕಾರಿಯಾಗಿರುತ್ತಾರೆ.

## ವಾಣಿಜ್ಯ ತೆರಿಗೆ ಇಲಾಖೆ

ಮಂಗಳೂರಿನಲ್ಲಿ ೧೯೬೫ ರಿಂದ ವಾಣಿಜ್ಯ ತೆರಿಗೆ ಇಲಾಖಾ ಕಚೇರಿಯು ಕಾರ್ಯನಿರ್ವಹಿಸುತ್ತಿದೆ. ಮೊದಲು ವಾಣಿಜ್ಯ ತೆರಿಗೆ ಉಪಆಯುಕ್ತರು (ಆಡಳಿತ) ಎಂದು ಇದ್ದ ಈ ಕಚೇರಿಯ ಮುಖ್ಯಸ್ಥರ ಹುದ್ದೆಯ ಹೆಸರು ೧೯೯೨ರಿಂದ ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಆಡಳಿತ) ಎಂದು ಆಗಿ, ೨೦೦೫ರಿಂದ ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಆಡಳಿತ), ಡಿ.ವಿ.ಓ ಎಂದು ಬದಲಾಗಿರುತ್ತದೆ. ಇದು ಮಂಗಳೂರು ವಿಭಾಗ ಕಚೇರಿಯಾಗಿದ್ದು, ಇದರ ಆಡಳಿತ ವ್ಯಾಪ್ತಿಗೆ ದಕ್ಷಿಣ ಕನ್ನಡ, ಉಡುಪಿ ಹಾಗೂ ಕೊಡಗು ಜಿಲ್ಲೆಗಳು ಸೇರಿವೆ. ಜಂಟಿ ಆಯುಕ್ತರ ಕಚೇರಿ ಕಾರ್ಯದಲ್ಲಿ ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತ, ಲೆಕ್ಕ ಅಧೀಕ್ಷಕ, ನಿರೀಕ್ಷಕ ಮೊದಲಾದ ಇತರ ಅಧಿಕಾರಿ, ಸಿಬ್ಬಂದಿಗಳು ನೆರವಾಗುತ್ತಾರೆ. ಇವರಲ್ಲದೆ ಮಂಗಳೂರಿನಲ್ಲಿ ವಾಣಿಜ್ಯ ತೆರಿಗೆ ಉಪ ಆಯುಕ್ತರು, ಉಡುಪಿ, ಕುಂದಾಪುರ ಹಾಗೂ ಮಡಿಕೇರಿಗಳಲ್ಲಿ ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು, ಬಂಟ್ವಾಳ, ಪುತ್ತೂರು, ಬೆಳ್ತಂಗಡಿ, ಕಾರ್ಕಳ ಹಾಗೂ ವಿರಾಜಪೇಟೆಗಳಲ್ಲಿ ವಾಣಿಜ್ಯ ತೆರಿಗೆ ಅಧಿಕಾರಿಗಳೂ ಇವರ ಮಾರ್ಗದರ್ಶನದಲ್ಲಿಯೇ ಕಾರ್ಯನಿರ್ವಹಿಸುತ್ತಾರೆ.

ರಾಜ್ಯ ಸರ್ಕಾರವು ನಿಗಧಿಪಡಿಸಿದಂತೆ ಕರ ನಿರ್ಧಾರಣೆ, ತೆರಿಗೆ ಸಂಗ್ರಹಣೆ, ತೆರಿಗೆ ವಂಚನೆ ವಿರುದ್ಧ ಕಾನೂನಿನಂತೆ ಕ್ರಮಕೈಗೊಳ್ಳುವುದು ಮೊದಲಾದ ಧ್ಯೇಯೋದ್ದೇಶಗಳನ್ನು ಈ ಕಚೇರಿ ಹೊಂದಿದೆ. ಇದಕ್ಕಾಗಿ ಕರ್ನಾಟಕ ಮಾರಾಟ ತೆರಿಗೆ ಕಾಯ್ದೆ ೧೯೫೭, ಕೇಂದ್ರ ಮಾರಾಟ ತೆರಿಗೆ ಕಾಯ್ದೆ ೧೯೫೬, ಕರ್ನಾಟಕ ಪ್ರವೇಶ ತೆರಿಗೆ ಕಾಯ್ದೆ ೧೯೭೯, ಮೌಲ್ಯವರ್ಧಿತ ತೆರಿಗೆ ಕಾಯ್ದೆ (ವ್ಯಾಟ್) ಮೊದಲಾದ ನಿಯಮ, ಅಧಿನಿಯಮಗಳನ್ನು ಈ ಕಚೇರಿ ಅನುಸರಿಸುತ್ತದೆ. ವಾಣಿಜ್ಯ ತೆರಿಗೆ ಆಯುಕ್ತರು, ಬೆಂಗಳೂರು ಅವರು ಮೇಲಧಿಕಾರಿಯಾಗಿರುತ್ತಾರೆ.

## ಸಣ್ಣ ಉಳಿತಾಯ ಇಲಾಖೆ

ಸಾರ್ವಜನಿಕರಲ್ಲಿ ಉಳಿತಾಯ ಮನೋಭಾವ ಮೂಡಿಸುವ ಮೂಲಕ ಅಭಿವೃದ್ಧಿ ಕಾರ್ಯಗಳಿಗೆ ಅಗತ್ಯವಾಗುವ ಸಂಪನ್ಮೂಲವನ್ನು ಸಂಗ್ರಹಿಸುವ ಉದ್ದೇಶದಿಂದ ಸಣ್ಣ ಉಳಿತಾಯ ಇಲಾಖೆಯ ಜಿಲ್ಲಾ ಕಚೇರಿಯು ಮಂಗಳೂರಿನಲ್ಲಿ ಕಾರ್ಯನಿರ್ವಹಿಸುತ್ತಿದೆ. ದಕ್ಷಿಣ ಕನ್ನಡ ಜಿಲ್ಲಾ ವ್ಯಾಪ್ತಿ ಆಡಳಿತ ಅಧಿಕಾರ ಹೊಂದಿರುವ ಸಹಾಯಕ ನಿರ್ದೇಶಕರು ಈ ಕಚೇರಿಯ ಮುಖ್ಯಸ್ಥರಾಗಿದ್ದು, ಅಭಿವೃದ್ಧಿ ಅಧಿಕಾರಿಗಳು,

ಬೆರಳಚ್ಚುಗಾರ ಮತ್ತಿತರ ಸಿಬ್ಬಂದಿ ಇವರಿಗೆ ನೆರವಾಗುತ್ತದೆ. ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿನ ಸಹಾಯಕ ಅಭಿವೃದ್ಧಿ ಅಧಿಕಾರಿಗಳು ಜಿಲ್ಲಾ ಕಚೇರಿಯ ಅಧೀನದಲ್ಲಿ ಆಯಾ ತಾಲೂಕು ವ್ಯಾಪ್ತಿ ಆಡಳಿತ ನಿರ್ವಹಿಸುತ್ತಾರೆ.

ಜಿಲ್ಲೆಗೆ ನಿಗದಿಪಡಿಸಿದ ಸಣ್ಣ ಉಳಿತಾಯದ ಗುರಿ ಸಾಧಿಸುವುದು, ಗ್ರಾಮಾಂತರ ಮತ್ತು ಪಟ್ಟಣಗಳಲ್ಲಿ ಏಜೆಂಟರ ನೇಮಕ ಮಾಡಿ ಜನರಲ್ಲಿ ಸಣ್ಣ ಉಳಿತಾಯದ ಪ್ರವೃತ್ತಿ ಬೆಳೆಸುವುದು ಮೊದಲಾದುವು ಈ ಇಲಾಖೆಯ ಮುಖ್ಯ ಧ್ಯೇಯೋದ್ದೇಶಗಳಾಗಿವೆ. ಪ್ರತೀ ತಾಲೂಕಿನಲ್ಲಿ ಬಚತ್ ಗ್ರಾಮವನ್ನು ಆಯ್ಕೆ ಮಾಡಿ ಆ ಗ್ರಾಮದ ಪ್ರತೀ ಕುಟುಂಬದಲ್ಲಿ ಸಣ್ಣ ಉಳಿತಾಯ ಮಾಡಿಸುವುದು, ಸಂಬಳಪಟ್ಟಿ ಉಳಿತಾಯ ಯೋಜನೆಯಂತೆ ಸರಕಾರಿ ಮತ್ತು ಖಾಸಗಿ ಸಂಸ್ಥೆಗಳ ನೌಕರರಿಂದ ಆವರ್ತಕ ಠೇವಣಿ (ಆರ್.ಡಿ.) ಖಾತೆ ಮೂಲಕ ಉಳಿತಾಯ ಮಾಡಿಸುವುದು ಮೊದಲಾದ ಕಾರ್ಯಗಳನ್ನು ಈ ಕಚೇರಿಯು ಅನುಷ್ಠಾನಕ್ಕೆ ತರುತ್ತಿದೆ. ನಿರ್ದೇಶಕರು, ಸಣ್ಣ ಉಳಿತಾಯ ಮತ್ತು ರಾಜ್ಯ ಲಾಟರಿ, ಬೆಂಗಳೂರು ಅವರು ಮೇಲಧಿಕಾರಿಯಾಗಿರುತ್ತಾರೆ.

### ಸಮಾಜ ಕಲ್ಯಾಣ ಇಲಾಖೆ

ರಾಜ್ಯಗಳ ಪುನರ್ ರಚನೆಗೆ ಮೊದಲು ಮದರಾಸು ಸರಕಾರದ ಅಧೀನದಲ್ಲಿ ಡೈರೆಕ್ಟರ್ ಆಫ್ ಹರಿಜನ್ ವೆಲ್‌ಫೇರ್ ಹೆಸರಿನಲ್ಲಿ ಕಾರ್ಯನಿರ್ವಹಿಸುತ್ತಿದ್ದ ಈ ಕಚೇರಿಯು ೧೯೫೬ರಿಂದ ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ ಎಂದು ಬದಲಾಗಿರುತ್ತದೆ. ಮಂಗಳೂರಿನಲ್ಲಿರುವ ಈ ಕಚೇರಿಯ ಮುಖ್ಯಸ್ಥರಾಗಿ ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿ ಇದ್ದು, ಅವರಿಗೆ ಸಹಾಯಕರಾಗಿ ಕಚೇರಿ ಅಧೀಕ್ಷಕ, ತನಿಖಾ ಸಹಾಯಕ, ಪ್ರಥಮ ದರ್ಜೆ ಸಹಾಯಕ ಮತ್ತಿತರ ಸಿಬ್ಬಂದಿ ವರ್ಗವಿದೆ. ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರ ಹೊಂದಿರುವ ಈ ಕಚೇರಿಯು ಪರಿಶಿಷ್ಟ ಜಾತಿಯವರ ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ಶ್ರೇಯೋಭಿವೃದ್ಧಿಗಾಗಿ ಸರಕಾರ ಹಮ್ಮಿಕೊಳ್ಳುವ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವುದನ್ನು ಮುಖ್ಯ ಧ್ಯೇಯೋದ್ದೇಶವನ್ನಾಗಿಸಿಕೊಂಡಿದೆ. ಅಂತೆಯೇ ಪರಿಶಿಷ್ಟ ಜಾತಿಯವರಿಗಾಗಿ ಇರುವ ವಿಶೇಷ ಘಟಕ ಯೋಜನೆಯ ಕಾರ್ಯಕ್ರಮಗಳನ್ನು ಜಾರಿಗೊಳಿಸುವುದು, ವಿದ್ಯಾರ್ಥಿಗಳಿಗಾಗಿ ಇರುವ ವಿದ್ಯಾರ್ಥಿ ವೇತನ, ಪ್ರೋತ್ಸಾಹ ಧನ ನೀಡುವುದು, ವಿದ್ಯಾರ್ಥಿ ನಿಲಯಗಳು ಹಾಗೂ ವಸತಿ ಶಾಲೆಗಳನ್ನು ನಡೆಸುವುದು, ಅಸ್ಪೃಶ್ಯತಾ ನಿವಾರಣಾ ಕಾರ್ಯಕ್ರಮದ ಅನುಷ್ಠಾನ, ಮೀಸಲಾತಿ ಅನುಷ್ಠಾನದ ಉಸ್ತುವಾರಿ ಮೊದಲಾದ ಚಟುವಟಿಕೆಗಳನ್ನು ನಡೆಸುತ್ತಿದೆ.

ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರ ಹೊಂದಿರುವ ಈ ಕಚೇರಿಯ ಅಧೀನದಲ್ಲಿ ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿಗಳು ತಾಲೂಕಿನ ಸಮಾಜ ಕಲ್ಯಾಣ ಇಲಾಖೆಯ ಪರಿಶಿಷ್ಟ ಜಾತಿಯವರ ಕಲ್ಯಾಣ ಕಾರ್ಯಕ್ರಮಗಳೊಂದಿಗೆ ಪರಿಶಿಷ್ಟ ವರ್ಗದವರ ಕಲ್ಯಾಣ ಕಾರ್ಯಕ್ರಮಗಳ ಉಸ್ತುವಾರಿಯನ್ನೂ ನೋಡಿಕೊಳ್ಳುತ್ತಾರೆ. ಕರ್ನಾಟಕ ರಾಜ್ಯ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳ ದೌರ್ಜನ್ಯ ತಡೆ ಕಾಯಿದೆ ೧೯೮೯, ಸೋಷಿಯಲ್ ವೆಲ್‌ಫೇರ್ ಮ್ಯಾನ್ಯುಯಲ್ ಮೊದಲಾದ ಕಾಯಿದೆ, ನಿಯಮಗಳನ್ನು ಈ ಕಚೇರಿ ತನ್ನ ಕಾರ್ಯಗಳಲ್ಲಿ ಅನುಸರಿಸುತ್ತದೆ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್, ಮಂಗಳೂರು ಅವರು ಮೇಲಧಿಕಾರಿಯಾಗಿರುತ್ತಾರೆ.

### ಸಾರಿಗೆ ಇಲಾಖೆ

ಮಂಗಳೂರಿನಲ್ಲಿನ ಪ್ರಾದೇಶಿಕ ಸಾರಿಗೆ ಕಚೇರಿಯು ಮಂಗಳೂರು ಹಾಗೂ ಬಂಟ್ವಾಳ ತಾಲೂಕುಗಳ ಆಡಳಿತ ವ್ಯಾಪ್ತಿ ಹೊಂದಿರುತ್ತದೆ. ಮೋಟಾರು ವಾಹನಗಳ ತೆರಿಗೆ ಸಂಗ್ರಹಣೆ, ಮೋಟಾರು ವಾಹನಗಳ ಕಾಯ್ದೆ–ಕಾನೂನುಗಳನ್ನು ಅನುಷ್ಠಾನಗೊಳಿಸುವುದು ಈ ಕಚೇರಿಯ ಮುಖ್ಯ ಧ್ಯೇಯೋದ್ದೇಶಗಳಾಗಿವೆ. ರಸ್ತೆ ಸುರಕ್ಷತಾ ಸಪ್ತಾಹ, ವಾಯುಮಾಲಿನ್ಯ ಸಪ್ತಾಹ ಆಚರಣೆ, ಮೋಟಾರು ವಾಹನ ಇಲಾಖೆಗೆ ಸಂಬಂಧಿಸಿದ ಸಾರ್ವಜನಿಕ ಕಾರ್ಯಕ್ರಮಗಳನ್ನು ನಡೆಸುವುದು ಮೊದಲಾದುವು ಈ ಕಚೇರಿಯು ಹಮ್ಮಿಕೊಂಡಿರುವ ವಿವಿಧ ಅಭಿವೃದ್ಧಿ ಚಟುವಟಿಕೆಗಳಾಗಿವೆ. ಕೇಂದ್ರ ಮೋಟಾರು ವಾಹನ ಕಾಯ್ದೆ ೧೯೮೮, ಕೇಂದ್ರ ಮೋಟಾರು ವಾಹನಗಳ ನಿಯಮಗಳು ೧೯೮೯, ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಕಾಯಿದೆ ಮತ್ತು ನಿಯಮಗಳು ೧೯೫೭, ಮೊದಲಾದ ನಿಯಮ ಹಾಗೂ ಅಧಿನಿಯಮಗಳನ್ನು ಈ ಕಚೇರಿಯು ತನ್ನ ಕಾರ್ಯಗಳಲ್ಲಿ ಅನುಸರಿಸುತ್ತದೆ.

ಪ್ರಾದೇಶಿಕ ಸಾರಿಗೆ ಅಧಿಕಾರಿ ಅವರು ಈ ಕಚೇರಿಯ ಮುಖ್ಯಸ್ಥರಾಗಿದ್ದಾರೆ. ಪುತ್ತೂರಿನಲ್ಲಿ ೧೯೮೨ ರಿಂದ ಕಾರ್ಯನಿರ್ವಹಿಸುತ್ತಿರುವ ಸಹಾಯಕ ಪ್ರಾದೇಶಿಕ ಸಾರಿಗೆ ಕಚೇರಿಯನ್ನು ೨೦೦೫ರಿಂದ ಪ್ರಾದೇಶಿಕ ಸಾರಿಗೆ ಕಚೇರಿಯಾಗಿ ಮೇಲ್ದರ್ಜೆಯಾಗಿ ಏರಿಸಲಾಗಿರುತ್ತದೆ.

ಪುತ್ತೂರು, ಬೆಳ್ತಂಗಡಿ ಹಾಗೂ ಸುಳ್ಯ ತಾಲೂಕುಗಳು ಸದರಿ ಕಚೇರಿಯ ಆಡಳಿತ ವ್ಯಾಪ್ತಿಗೆ ಸೇರುತ್ತದೆ. ಉಪ ಸಾರಿಗೆ ಆಯುಕ್ತರು, ಶಿವಮೊಗ್ಗ ವಿಭಾಗ, ಶಿವಮೊಗ್ಗ ಅವರು ಮೇಲಧಿಕಾರಿಯಾಗಿರುತ್ತಾರೆ.

## ಸಾರ್ವಜನಿಕ ಗ್ರಂಥಾಲಯ ಇಲಾಖೆ

ಮಂಗಳೂರಿನಲ್ಲಿ ೧೯೪೯ರಿಂದ ಕಾರ್ಯನಿರ್ವಹಿಸುತ್ತಿರುವ ಜಿಲ್ಲಾ ಕೇಂದ್ರ ಗ್ರಂಥಾಲಯವು ಹಿಂದೆ ದೇಶಭಕ್ತ ಕಾರ್ನಾಡ್ ಸದಾಶಿವರಾವ್ ಗ್ರಂಥಾಲಯ ಹೆಸರಿನಲ್ಲಿ ಲೋಕಲ್ ಲೈಬ್ರರಿ ಅಥಾರಿಟಿಯ ಅಡಿಯಲ್ಲಿದ್ದಿತು. ಮುಖ್ಯ ಗ್ರಂಥಾಲಯಾಧಿಕಾರಿಯು ಈ ಕಚೇರಿಯ ಮುಖ್ಯಸ್ಥರಾಗಿದ್ದು, ದಕ್ಷಿಣ ಕನ್ನಡ ಜಿಲ್ಲಾ ವ್ಯಾಪ್ತಿ (ಮಹಾನಗರಪಾಲಿಕೆ ಹೊರತುಪಡಿಸಿ) ಆಡಳಿತಾಧಿಕಾರ ಹೊಂದಿರುತ್ತಾರೆ. ಇವರ ನೆರವಿಗೆ ಗ್ರಂಥಪಾಲಕರು, ಸಹಾಯಕ ಗ್ರಂಥಪಾಲಕರು, ಗ್ರಂಥಾಲಯ ಸಹಾಯಕರು, ಗ್ರಂಥಾಲಯ ಸಹವರ್ತಿ ಮೊದಲಾದ ವಿವಿಧ ಅಧಿಕಾರಿ, ಸಿಬ್ಬಂದಿಗಳಿದ್ದಾರೆ. ಇವರ ಅಧೀನದಲ್ಲಿ ಜಿಲ್ಲೆಯಾದ್ಯಂತ ಪ್ರಸ್ತುತ ೧೦ ಶಾಖಾ ಗ್ರಂಥಾಲಯಗಳು ಹಾಗೂ ೭೧ ಗ್ರಾಮ ಪಂಚಾಯ್ತಿ ಗ್ರಂಥಾಲಯಗಳು ಓದುಗರಿಗೆ ಗ್ರಂಥಾಲಯ ಸೇವೆಯನ್ನು ಒದಗಿಸುತ್ತಿವೆ. ೧೯೬೫ರ ಸಾರ್ವಜನಿಕ ಗ್ರಂಥಾಲಯ ಕಾಯ್ದೆಯಂತೆ ಸಾರ್ವಜನಿಕರಿಗೆ ಉಪಯುಕ್ತವಾದ ಗ್ರಂಥಗಳು, ದಿನಪತ್ರಿಕೆ ಹಾಗೂ ನಿಯತಕಾಲಿಕೆಗಳನ್ನು ಒದಗಿಸಿ ಅವರ ಜ್ಞಾನಾರ್ಜನೆಗೆ ನೆರವಾಗುವುದು, ಅವರನ್ನು ಸತ್‌ಪ್ರಜೆಗಳನ್ನಾಗಿ ರೂಪಿಸುವುದು ಗ್ರಂಥಾಲಯ ಇಲಾಖೆಯ ಪ್ರಮುಖ ಧ್ಯೇಯೋದ್ದೇಶವಾಗಿದೆ. ನಿರ್ದೇಶಕ, ಸಾರ್ವಜನಿಕ ಗ್ರಂಥಾಲಯಗಳ ಇಲಾಖೆ, ಬೆಂಗಳೂರು ಅವರ ಮೇಲಧಿಕಾರಿಯಾಗಿರುತ್ತಾರೆ.

## ಸಾರ್ವಜನಿಕ ಶಿಕ್ಷಣ ಇಲಾಖೆ

ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರ ಕಚೇರಿ (ಆಡಳಿತ)ಯು ೧೯೭೦ರಲ್ಲಿ ಮಂಗಳೂರಿನಲ್ಲಿ ಆರಂಭಗೊಂಡಿತು. ರಾಜ್ಯಗಳ ಪುನರ್ ರಚನೆಗೆ ಮೊದಲು ಈ ಇಲಾಖೆಯು ಮದರಾಸು ಸರಕಾರದ ಅಧೀನಕ್ಕೆ ಒಳಪಟ್ಟಿತ್ತು ಹಾಗೂ ಆಗ ಜಿಲ್ಲಾ ಶಿಕ್ಷಣಾಧಿಕಾರಿಯು ಕಚೇರಿಯ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸುತ್ತಿದ್ದರು. ಪ್ರಸ್ತುತ, ಜಿಲ್ಲಾ ಪಂಚಾಯತ್ ಅಡಿಯಲ್ಲಿನ ಈ ಕಚೇರಿಯು ದಕ್ಷಿಣ ಕನ್ನಡ ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರ ಹೊಂದಿರುತ್ತದೆ. ಉಪನಿರ್ದೇಶಕರು ಈ ಕಚೇರಿಯ ಮುಖ್ಯಸ್ಥರಾಗಿದ್ದು, ಅವರ ನೆರವಿಗೆ ವಿದ್ಯಾಧಿಕಾರಿ, ವಿಷಯ ಪರಿವೀಕ್ಷಣಾಧಿಕಾರಿಗಳು, ಜಿಲ್ಲಾ ದೈಹಿಕ ಶಿಕ್ಷಣ ಅಧೀಕ್ಷಕ, ಉರ್ದು ಶಿಕ್ಷಣ ಸಂಯೋಜಕ, ಅಧೀಕ್ಷಕರು ಮೊದಲಾದವರಿದ್ದಾರೆ. ಸರ್ವಶಿಕ್ಷಾ ಅಭಿಯಾನ ಶಾಖೆಯಲ್ಲಿ ಉಪಯೋಜನಾ ಸಮನ್ವಯಾಧಿಕಾರಿ, ಲೆಕ್ಕ ಅಧೀಕ್ಷಕರು, ಮೊದಲಾದ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ. ತಾಲೂಕು ಮಟ್ಟದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ಇಲಾಖೆಯ ಯೋಜನೆಗಳನ್ನು ಅನುಷ್ಠಾನಕ್ಕೆ ತರುವ ಸಮನ್ವಯಾಧಿಕಾರಿಯಾಗಿರುತ್ತಾರೆ.

ಜಿಲ್ಲೆಯಲ್ಲಿ ಶೈಕ್ಷಣಿಕ ಚಟುವಟಿಕೆಗಳ ವ್ಯವಸ್ಥಿತ ಬೆಳವಣಿಗೆ ಮತ್ತು ನಿಯಂತ್ರಣವು ಶಿಕ್ಷಣ ಇಲಾಖೆಯ ಮುಖ್ಯ ಧ್ಯೇಯೋದ್ದೇಶವಾಗಿದ್ದು, ಅದಕ್ಕೆ ಪೂರಕವಾಗಿ ಸರಕಾರವು ಕಾಲಕಾಲಕ್ಕೆ ಹಮ್ಮಿಕೊಳ್ಳುವ ಉಚಿತ ಪಠ್ಯಪುಸ್ತಕ ವಿತರಣೆ, ನ್ಯೂನತೆಯುಳ್ಳ ಮಕ್ಕಳೂ ಇತರ ಮಕ್ಕಳಂತೆ ವಿಕಾಸ ಹೊಂದಲು ಸಹಾಯಕವಾಗುವ 'ಸಮನ್ವಯ ಶಿಕ್ಷಣ ೧೯೮೮'ರ ಜಾರಿ, ಮಧ್ಯಾಹ್ನ ಬಿಸಿಯೂಟ ನೀಡಿಕೆ ಮೊದಲಾದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿದೆ (ವಿವರಕ್ಕೆ 'ಶಿಕ್ಷಣ ಮತ್ತು ಕ್ರೀಡೆ' ಅಧ್ಯಾಯ ನೋಡಿ).

## ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ

ಭಾರತೀಯ ಸೈನಿಕರ ಕುಟುಂಬದವರ ಕ್ಷೇಮಾಭಿವೃದ್ಧಿಗಾಗಿ ೧೯೧೭ರಲ್ಲಿ ಭಾರತೀಯ ಸೈನಿಕ ಮಂಡಲಿ ಸ್ಥಾಪಿತವಾಯಿತು. ಬಳಿಕ ವಾಯುಸೇನೆ ಮತ್ತು ನೌಕಾದಳಗಳನ್ನು ಈ ಮಂಡಲಿ ವ್ಯಾಪ್ತಿಗೆ ಒಳಪಡಿಸಿದ್ದರಿಂದ 'Indian Soldiers, Sailors and Airmen Board' ಎಂದು ಪುನರ್ ನಾಮಕರಣ ಮಾಡಲಾಯಿತು. ದೆಹಲಿಯಲ್ಲಿನ ಆಗಿನ ಬ್ರಿಟಿಷ್ ಆಡಳಿತಗಾರರ ಆಶಯದಂತೆ ಸೈನಿಕ ಕಲ್ಯಾಣ ಕಾರ್ಯಕ್ರಮಗಳನ್ನು ಹೆಚ್ಚು ಕ್ಷಿಪ್ರ ಹಾಗೂ ಪರಿಣಾಮಕಾರಿಯಾಗಿ ಜಾರಿಗೊಳಿಸುವ ಸಲುವಾಗಿ ರಾಜ್ಯ ಮತ್ತು ಜಿಲ್ಲಾ ಮಟ್ಟಗಳಲ್ಲಿ ಮಂಡಳಿಯ ಕಚೇರಿಗಳನ್ನು ತೆರೆಯಲಾಯಿತು. ಆದರೆ, ಭಾರತೀಯರ ಆದಿಪತ್ಯಕ್ಕೆ ಒಳಪಟ್ಟಿದ್ದ ಪ್ರಾಂತ್ಯಗಳಲ್ಲಿ ರಾಜ್ಯ ಮಟ್ಟದ ಕಚೇರಿಗಳನ್ನು ಮಾತ್ರ ಪ್ರಾರಂಭಿಸಲಾಯಿತು.

ಸ್ವಾತಂತ್ರ್ಯಪೂರ್ವದಲ್ಲಿ ಮೈಸೂರು ಅರಸರು ತಮ್ಮ ಸಂಸ್ಥಾನದ ಸೈನಿಕರ ಮತ್ತು ಮಾಜಿ ಸೈನಿಕರ ಕ್ಷೇಮಾಭಿವೃದ್ಧಿಗಾಗಿ ಸೈನಿಕ ಮಂಡಲಿಯನ್ನು ಮೈಸೂರಿನಲ್ಲಿ ಸ್ಥಾಪಿಸಿದರು. ಸ್ವಾತಂತ್ರ್ಯಾನಂತರ ಮೈಸೂರು ಸೈನಿಕ ಮಂಡಲಿಯು ಸರಕಾರದ ಗೃಹ ಸಚಿವಾಲಯದ ವ್ಯಾಪ್ತಿಗೆ ಬಂದಿತು. ೧೯೬೩ರಲ್ಲಿ ಈ ಮಂಡಲಿಯ ಸಿಬ್ಬಂದಿಯನ್ನು ಖಾಯಂಗೊಳಿಸಿ, ಸರಕಾರದ ನೌಕರರೆಂದು ಪರಿಗಣಿಸಲಾಯಿತು. ೧೯೭೬ರಲ್ಲಿ ಕೇಂದ್ರ ಸರಕಾರದ ಆದೇಶದಂತೆ ಕರ್ನಾಟಕ ರಾಜ್ಯ ಸೈನಿಕ ಮಂಡಲಿ ಎಂದು ಪುನರ್ ನಾಮಕರಣ ಮಾಡಲಾಯಿತು ಹಾಗೂ ೧೯೮೦ರಿಂದ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಎಂದು ಬದಲಿಸಲಾಯಿತು. ಸರಕಾರ ಹಾಗೂ ಸೈನಿಕರು ಮತ್ತು ಅವರ ಕುಟುಂಬದವರ ನಡುವೆ ಸೇತುವೆಯಂತಿರುವ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖಾ ಜಿಲ್ಲಾ ಕಛೇರಿಯು ಮಂಗಳೂರಿನಲ್ಲಿದ್ದು ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಆಡಳಿತವನ್ನು ನೋಡಿಕೊಳ್ಳುತ್ತಿದೆ. ಉಪನಿರ್ದೇಶಕ ಅವರು ಈ ಕಛೇರಿಯ ಮುಖ್ಯಸ್ಥರಾಗಿರುತ್ತಾರೆ. ನಿವೃತ್ತ ಯೋಧರಿಗೆ ಪುನರ್ ಉದ್ಯೋಗ ಕಲ್ಪಿಸುವುದು, ಅವರ ಮತ್ತು ಅವರ ಅವಲಂಬಿತರಿಗೆ ಶೈಕ್ಷಣಿಕ ಸವಲತ್ತುಗಳನ್ನು ದೊರಕಿಸಿಕೊಡುವುದು, ಎಲ್ಲಾ ನಿವೃತ್ತಯೋಧರ ಜನಗಣತಿ ಹಾಗೂ ದಾಖಲೆಗಳನ್ನು ಇಂದೀಕರಿಸಿ ಕಾಯ್ದಿರಿಸುವುದು, ಸರಕಾರ ನೀಡುವ ಸವಲತ್ತುಗಳನ್ನು ಸೂಕ್ತವಾಗಿ ಬಳಸಿಕೊಳ್ಳುವಂತೆ ಅಂತಹ ಅರ್ಹರಿಗೆ ಕಾಲಕಾಲಕ್ಕೆ ವಿವಿಧ ಮಾಧ್ಯಮಗಳ ಮೂಲಕ ತಿಳಿಸುವುದು, ಸಶಸ್ತ್ರಬಲ ಬಾವುಟ ದಿನಾಚರಣೆ ನಿಧಿಗಾಗಿ ಬಾವುಟಗಳ ಮಾರಾಟದ ಮೂಲಕ ಹಣ ಸಂಗ್ರಹಿಸುವುದು ಮೊದಲಾದ ಚಟುವಟಿಕೆಗಳನ್ನು ಈ ಕಚೇರಿ ನಿರ್ವಹಿಸುತ್ತದೆ. ನಿರ್ದೇಶಕ, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ, ಬೆಂಗಳೂರು ಅವರು ಮೇಲಧಿಕಾರಿ ಆಗಿರುತ್ತಾರೆ.

### ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ

ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ಪುರೋಭಿವೃದ್ಧಿಗಾಗಿ ಸರಕಾರವು ಶಿಕ್ಷಣ ಹಾಗೂ ಸರಕಾರಿ ಸೇವೆಗಳಲ್ಲಿ ಮೀಸಲಾತಿ ಸೌಲಭ್ಯ ಒದಗಿಸಿರುವುದಲ್ಲದೆ ಆ ವರ್ಗಗಳ ಅರ್ಹ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಅಗತ್ಯವಾದ ನೆರವನ್ನು ನೀಡುವುದಕ್ಕಾಗಿ, ಜಿಲ್ಲಾ ಕೇಂದ್ರಗಳಲ್ಲಿ ಇಲಾಖಾ ಕಚೇರಿಗಳನ್ನು ಸ್ಥಾಪಿಸಿದೆ. ಮಂಗಳೂರಿನಲ್ಲಿ ೧೯೭೭ರಲ್ಲಿ ಪ್ರಾರಂಭವಾದ ಈ ಕಚೇರಿಯ ಮುಖ್ಯಸ್ಥರಾಗಿ ಜಿಲ್ಲಾ ಅಧಿಕಾರಿ ಇದ್ದು, ಅವರು ದಕ್ಷಿಣ ಕನ್ನಡ ಜಿಲ್ಲಾ ವ್ಯಾಪ್ತಿಯ ಆಡಳಿತಾಧಿಕಾರ ಹೊಂದಿರುತ್ತಾರೆ. ಅವರ ನೆರವಿಗೆ ಕಚೇರಿ ಮೇಲ್ವಿಚಾರಕ, ಪ್ರಥಮ ದರ್ಜೆ ಸಹಾಯಕ ಮತ್ತಿತರ ಸಿಬ್ಬಂದಿ ಇದ್ದಾರೆ. ಈ ಕಚೇರಿಯ ಅಧೀನದಲ್ಲಿ ವಿಸ್ತರಣಾಧಿಕಾರಿಗಳು ಇದ್ದು, ಅವರು ಆಯಾ ತಾಲೂಕು ಪಂಚಾಯತ್‌ಗಳ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಾರೆ. ಬೆಳ್ತಂಗಡಿ ತಾಲೂಕಿನ ಮಚ್ಚಿನದಲ್ಲಿ ಹಿಂದುಳಿದ ವರ್ಗಗಳ ಇಲಾಖೆಗೆ ಸೇರಿದ ಮೊರಾರ್ಜಿ ದೇಸಾಯಿ ವಸತಿ ಶಾಲೆ ಇದ್ದು, ಪ್ರಾಂಶುಪಾಲರು ಅದರ ಮುಖ್ಯಸ್ಥರಾಗಿರುತ್ತಾರೆ.

ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತ ಗುಂಪುಗಳಿಗೆ ಸೇರಿದ ಅರ್ಹ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಮಂಜೂರು ಮಾಡುವುದು, ವಿದ್ಯಾರ್ಥಿನಿಲಯಗಳಿಗೆ ಅಗತ್ಯವಾದ ಮೂಲಸೌಲಭ್ಯಗಳನ್ನು ಒದಗಿಸುವುದು, ಅಲ್ಪಸಂಖ್ಯಾತರ ಸಮುದಾಯಭವನಗಳ ನಿರ್ಮಾಣಕ್ಕೆ ಅನುದಾನ ನೀಡುವುದು, ವೃತ್ತಿ ತರಬೇತಿಗಳನ್ನು ನಡೆಸುವುದು ಮೊದಲಾದ ಸರಕಾರದ ಯೋಜನೆಗಳನ್ನು ಈ ಇಲಾಖೆ ಕಾರ್ಯರೂಪಕ್ಕೆ ತರುತ್ತಿದೆ. ರಾಜ್ಯಮಟ್ಟದಲ್ಲಿ ಅಲ್ಪಸಂಖ್ಯಾತರ ಇಲಾಖೆಯನ್ನು ಪ್ರತ್ಯೇಕವಾಗಿ ರಚಿಸಿದ್ದರೂ, ಜಿಲ್ಲಾ ಮಟ್ಟದಲ್ಲಿ ಒಬ್ಬರೇ ಅಧಿಕಾರಿ ಈ ಎರಡೂ ಇಲಾಖೆಗಳ ಕಾರ್ಯಗಳನ್ನು ನೋಡಿಕೊಳ್ಳುತ್ತಾರೆ. ಮುಖ್ಯಕಾರ್ಯನಿರ್ವಾಹಕ ಅಧಿಕಾರಿ, ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್, ಮಂಗಳೂರು ಅವರು ಮೇಲಧಿಕಾರಿಯಾಗಿರುತ್ತಾರೆ.

## ಕೇಂದ್ರ ಸರ್ಕಾರದ ಕಚೇರಿಗಳು

### ಆಕಾಶವಾಣಿ

ಕೇಂದ್ರ ಸರಕಾರದ ವಾರ್ತಾ ಮತ್ತು ಪ್ರಚಾರ ಇಲಾಖೆಯ ಪ್ರಸಾರ ಭಾರತಿಗೆ (ಭಾರತೀಯ ಪ್ರಸಾರ ನಿಗಮ) ಸೇರಿದ ಆಕಾಶವಾಣಿ ನಿಲಯ ಕೇಂದ್ರವು ಮಂಗಳೂರಿನಲ್ಲಿ ೧೯೭೬ರಿಂದ ಕಾರ್ಯನಿರ್ವಹಿಸುತ್ತಿದೆ. ದಕ್ಷಿಣ ಕನ್ನಡ, ಉಡುಪಿ ಹಾಗೂ ಕಾಸರಗೋಡು ಜಿಲ್ಲೆಗಳ ಪ್ರಸಾರ ವ್ಯಾಪ್ತಿಯನ್ನು ಹೊಂದಿದ ಈ ನಿಲಯದ ಮುಖ್ಯಸ್ಥರಾಗಿ ನಿಲಯ ನಿರ್ದೇಶಕರಿದ್ದು ಅವರ ನೆರವಿಗೆ ಕಾರ್ಯಕ್ರಮ ನಿರ್ವಾಹಕ, ನಿಲಯ ಅಭಿಯಂತರರು, ಕಾರ್ಯಕ್ರಮ ನಿರ್ಮಾಪಕರು, ಪ್ರಸರಣ ನಿರ್ವಾಹಕ ಮತ್ತಿತರ ಅಧಿಕಾರಿ, ಸಿಬ್ಬಂದಿ ಇದ್ದಾರೆ. ಉಡುಪಿ ಜಿಲ್ಲೆಯ ಬ್ರಹ್ಮಾವರದಲ್ಲಿ ಆಕಾಶವಾಣಿಯ ಮರುಪ್ರಸಾರ ಕೇಂದ್ರವಿದ್ದು, ನಿಲಯ ಅಭಿಯಂತರ ಅವರು ಅದರ ಮುಖ್ಯಸ್ಥರಾಗಿರುತ್ತಾರೆ.

ಮಾಹಿತಿ, ಶಿಕ್ಷಣ ಮತ್ತು ಮನರಂಜನೆಗೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ಪ್ರಸಾರ ಮಾಡುವುದು, ಸರಕಾರದ ವಿವಿಧ ಅಭಿವೃದ್ಧಿಪರ ಯೋಜನೆಗಳನ್ನು ಕುರಿತಾದ ಕಾರ್ಯಕ್ರಮಗಳನ್ನು ಪ್ರಸಾರ ಮಾಡುವ ಮೂಲಕ ಅಭಿವೃದ್ಧಿಯಲ್ಲಿ ವೇಗವರ್ಧಕವಾಗಿ ಕೆಲಸ ಮಾಡುವುದು, ಭಾರತೀಯ ಕಲೆ, ಸಾಹಿತ್ಯ, ಸಂಸ್ಕೃತಿಗಳಿಗೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ಪ್ರಸಾರ ಮಾಡುವ ಮೂಲಕ ಈ ಕ್ಷೇತ್ರಗಳ ಪ್ರತಿಭಾವಂತರನ್ನು ಪ್ರೋತ್ಸಾಹಿಸುವುದು ಮೊದಲಾದುವು ಈ ಕಚೇರಿಯ ಮುಖ್ಯ ಧ್ಯೇಯೋದ್ದೇಶಗಳಾಗಿವೆ. ತುಳು ಮತ್ತು ಕೊಂಕಣಿ ಭಾಷಾ ಕಾರ್ಯಕ್ರಮಗಳಿಗೂ ಈ ಕೇಂದ್ರದಲ್ಲಿ ವಿಶೇಷ ಅವಕಾಶಗಳನ್ನು ಕಲ್ಪಿಸಿಕೊಡಲಾಗಿದೆ. ಉಪ ಮಹಾನಿರ್ದೇಶಕ, ಆಕಾಶವಾಣಿ ಕೇಂದ್ರ, ಬೆಂಗಳೂರು ಅವರು ಮೇಲಧಿಕಾರಿಯಾಗಿರುತ್ತಾರೆ.

## ಕ್ಷೇತ್ರ ಪ್ರಚಾರ ನಿರ್ದೇಶನಾಲಯ

ಕೇಂದ್ರ ಸರಕಾರದ ವಾರ್ತಾ ಮತ್ತು ಪ್ರಚಾರ ಮಂತ್ರಾಲಯಕ್ಕೆ ಸೇರಿದ ಕ್ಷೇತ್ರ ಪ್ರಚಾರ ನಿರ್ದೇಶನಾಲಯದ ಜಿಲ್ಲಾ ಕಚೇರಿಯು ಮಂಗಳೂರಿನಲ್ಲಿ ೧೯೭೮ರಿಂದ ಕ್ಷೇತ್ರ ಪ್ರಚಾರ ಕಚೇರಿ ಹೆಸರಿನಲ್ಲಿ ಕಾರ್ಯನಿರ್ವಹಿಸುತ್ತಿದೆ. ದಕ್ಷಿಣ ಕನ್ನಡ, ಉಡುಪಿ ಹಾಗೂ ಕೊಡಗು ಜಿಲ್ಲಾ ವ್ಯಾಪ್ತಿಯ ಅಧಿಕಾರ ಹೊಂದಿರುವ ಕ್ಷೇತ್ರ ಪ್ರಚಾರ ಅಧಿಕಾರಿಯು ಈ ಕಚೇರಿಯ ಮುಖ್ಯಸ್ಥರಾಗಿದ್ದು, ಅವರ ನೆರವಿಗೆ ತಾಂತ್ರಿಕ ಸಹಾಯಕ ಮೊದಲಾದ ಸಿಬ್ಬಂದಿ ಇದ್ದಾರೆ. ಕೇಂದ್ರ ಸರಕಾರದ ಯೋಜನೆ ಮತ್ತು ಕಾರ್ಯಕ್ರಮಗಳನ್ನು ಪ್ರಚಾರ ಮಾಡುವುದು ಆ ಮೂಲಕ ಜನರಲ್ಲಿ ಅರಿವು ಮೂಡಿಸುವುದು ಈ ಕಚೇರಿಯ ಪ್ರಮುಖ ಕಾರ್ಯೋದ್ದೇಶವಾಗಿದೆ. ಜಂಟಿ ನಿರ್ದೇಶಕ, ಬೆಂಗಳೂರು ಅವರು ಮೇಲಧಿಕಾರಿಯಾಗಿರುತ್ತಾರೆ.

## ಭಾರತೀಯ ಅಂಚೆ ಇಲಾಖೆ

ಅಂಚೆ ಕಚೇರಿಗಳನ್ನು ಸರಿಯಾದ ರೀತಿಯಲ್ಲಿ ನಡೆಸುವುದು ಮತ್ತು ಅಂಚೆ ಸಂಪರ್ಕ ಸೇವೆಗಳನ್ನು ವ್ಯವಸ್ಥಿತವಾಗಿ ನಿರ್ವಹಿಸುವ ಪ್ರಮುಖ ಉದ್ದೇಶದಿಂದ ಮಂಗಳೂರು ವಿಭಾಗದ ಹಿರಿಯ ಅಂಚೆ ಅಧೀಕ್ಷಕರ ಕಚೇರಿಯು ಮಂಗಳೂರಿನಲ್ಲಿ ಕಾರ್ಯನಿರ್ವಹಿಸುತ್ತಿದೆ. ೧೯೪೯ರಲ್ಲಿ ಮಲಬಾರ್ ಅಂಚೆ ವಿಭಾಗದಿಂದ ದಕ್ಷಿಣ ಕನ್ನಡ ಅಂಚೆ ವಿಭಾಗವು ಪ್ರತ್ಯೇಕಗೊಂಡಿತು ಹಾಗೂ ೧೯೬೭ರಲ್ಲಿ ಇದನ್ನು ದ್ವಿತೀಯ ದರ್ಜೆಯಿಂದ ಪ್ರಥಮ ದರ್ಜೆಗೆ ಉನ್ನತೀಕರಿಸಲಾಯಿತು. ದಕ್ಷಿಣ ಕನ್ನಡ ಅಂಚೆ ವಿಭಾಗವನ್ನು ೧೯೭೩ರಲ್ಲಿ ಮಂಗಳೂರು, ಪುತ್ತೂರು ಹಾಗೂ ಉಡುಪಿ ಅಂಚೆ ವಿಭಾಗಗಳನ್ನಾಗಿ ವಿಭಜಿಸಲಾಯಿತು. ಮಂಗಳೂರು ಅಂಚೆ ವಿಭಾಗದ ಆಡಳಿತ ವ್ಯಾಪ್ತಿಗೆ ಮಂಗಳೂರು ತಾಲೂಕಿನ ಎಲ್ಲಾ ಅಂಚೆ ಕಚೇರಿಗಳು ಹಾಗೂ ಕಾರ್ಕಳ ಮತ್ತು ಬಂಟ್ವಾಳ ತಾಲೂಕಿನ ಕೆಲವು ಅಂಚೆ ಕಚೇರಿಗಳು ಒಳಪಟ್ಟಿವೆ. ಪುತ್ತೂರು ಅಂಚೆ ವಿಭಾಗದ ಆಡಳಿತ ವ್ಯಾಪ್ತಿಗೆ ಮೂಡಬಿದ್ರೆ, ಬೆಳ್ತಂಗಡಿ, ಸುಳ್ಯ ಹಾಗೂ ಬಂಟ್ವಾಳ ಮತ್ತು ಕಾರ್ಕಳ ತಾಲೂಕುಗಳ ಉಳಿದ ಅಂಚೆ ಕಚೇರಿಗಳು ಸೇರುತ್ತವೆ. ಉಪ ಅಂಚೆ ಅಧೀಕ್ಷಕ, ಹಿರಿಯ ಪೋಸ್ಟ್ ಮಾಸ್ಟರ್, ವ್ಯವಸ್ಥಾಪಕ–ಸ್ಪೀಡ್ ಪೋಸ್ಟ್ ಮೊದಲಾದುವು ಈ ಕಚೇರಿಯ ಇತರ ಕೆಲವು ಅಧಿಕಾರಿ, ಸಿಬ್ಬಂದಿ ಹುದ್ದೆಗಳಾಗಿವೆ. ಭಾರತೀಯ ಅಂಚೆ ಇಲಾಖೆ ಆಕ್ಟ್ ೧೮೭೩, ಅಂಚೆ ಕೈಪಿಡಿ ಮೊದಲಾದ ಕಾಯಿದೆ, ನಿಯಮಗಳನ್ನು ಈ ಕಚೇರಿಯು ಅನುಸರಿಸುತ್ತದೆ. ಪೋಸ್ಟ್ ಮಾಸ್ಟರ್ ಜನರಲ್, ದಕ್ಷಿಣ ಕರ್ನಾಟಕ ಕ್ಷೇತ್ರ, ಬೆಂಗಳೂರು ಅವರು ಮೇಲಧಿಕಾರಿಯಾಗಿರುತ್ತಾರೆ.

## ಭಾರತೀಯ ಭೂಗರ್ಭ ಸರ್ವೇಕ್ಷಣಾ ಇಲಾಖೆ

ಭಾರತೀಯ ಭೂಗರ್ಭ ಸರ್ವೇಕ್ಷಣೆ, ಸಾಗರ ಭೂವಿಜ್ಞಾನ ವಿಭಾಗವು ಕೇಂದ್ರ ಸರಕಾರದ ಗಣಿ ಮಂತ್ರಾಲಯ (ಇಲಾಖೆ)ಕ್ಕೆ ಸೇರಿದ್ದಾಗಿದೆ. ವಿಶ್ವದಲ್ಲಿಯೇ ಅತ್ಯಂತ ಹಳೆಯ ವೈಜ್ಞಾನಿಕ ಸಂಸ್ಥೆಗಳಲ್ಲಿ ಒಂದೆನಿಸಿದ ಈ ಭಾರತೀಯ ಭೂಗರ್ಭ ಸರ್ವೇಕ್ಷಣೆಯು ೧೯೭೦ರ ದಶಕದಲ್ಲಿ ಕಡಲಭಾಗದ ಚಿಕ್ಕ ನೆಲೆಯಲ್ಲಿ ತನ್ನ ಚಟುವಟಿಕೆಯನ್ನು ಆರಂಭಿಸಿತು. ಈ ಚಟುವಟಿಕೆಯನ್ನು ೧೯೮೦ರ ದಶಕದಲ್ಲಿ ದೊಡ್ಡ ಮಟ್ಟದಲ್ಲಿ ವಿಸ್ತರಿಸುವ ಕಾರ್ಯಕ್ರಮ ಹಮ್ಮಿಕೊಂಡಾಗ ಪಶ್ಚಿಮ ಕರಾವಳಿಯ ಸಾಗರ ಭೂವಿಜ್ಞಾನ ಯೋಜನೆಗಳಿಗೆಂದೇ ಮಂಗಳೂರಿನಲ್ಲಿ ಕಚೇರಿಯನ್ನು ಪ್ರಾರಂಭಿಸಿತು. ಕೊಲ್ಕತ್ತಾದಲ್ಲಿ ಮುಖ್ಯ ಕಾರ್ಯಾಲಯವಿರುವ ಈ ಮಂಗಳೂರು ಕಚೇರಿಯ ಈಗಿನ

ಅಧಿಕಾರ ವ್ಯಾಪ್ತಿಯು ತಾಂತ್ರಿಕವಾಗಿ ಗುಜರಾತ್ ಕರಾವಳಿತೀರದಿಂದ ಕನ್ಯಾಕುಮಾರಿ, ತೂತುಕುಡಿ ಮುಖಾಂತರ ಮನ್ನಾರ್ ಕೊಲ್ಲಿಯಲ್ಲಿ ರಾಮೇಶ್ವರದವರೆಗೆ ಇರುತ್ತದೆ. ಉಪ ಮಹಾನಿರ್ದೇಶಕರು ಈ ಕಚೇರಿಯ ಮುಖ್ಯಸ್ಥರಾಗಿದ್ದು ಅವರ ನೆರವಿಗೆ ನಿರ್ದೇಶಕರು, ಭೂವಿಜ್ಞಾನಿಗಳು, ಸಹಾಯಕ ರಸಾಯನ ವಿಜ್ಞಾನಿ, ನಕಾಶೆಗಾರ, ಭೂಮಾಪಕ ಮೊದಲಾದ ಅಧಿಕಾರಿ, ಸಿಬ್ಬಂದಿಗಳಿದ್ದಾರೆ.

ಭಾರತೀಯ ಭೂಗರ್ಭ ಸರ್ವೇಕ್ಷಣೆಯ ಸಾಗರ ಭೂವಿಜ್ಞಾನ ವಿಭಾಗವೂ ಸೇರಿದ ಈ ಕಚೇರಿಯು ಭಾರತ ಮತ್ತು ಅದರ ತೀರಪ್ರದೇಶದ ಭೂಗರ್ಭ, ಭೂಭೌತ ಮತ್ತು ಭೂರಾಸಾಯನಿಕ ವಿಷಯಗಳಿಗೆ ಸಂಬಂಧಿಸಿದ ಭೂಪಟಗಳನ್ನು ತಯಾರಿಸುವ ಮತ್ತು ಇಂದೀಕರಿಸುವ, ಖನಿಜ ಮತ್ತು ಶಕ್ತಿ ಸಂಪನ್ಮೂಲವನ್ನು ಶೋಧಿಸುವುದು ಹಾಗೂ ನಿಷ್ಕರ್ಷಿಸುವುದನ್ನು ಪ್ರಮುಖ ಧ್ಯೇಯೋದ್ದೇಶವನ್ನಾಗಿ ಹೊಂದಿದೆ. ಪ್ರಚಾಲನೆ: ಪಶ್ಚಿಮ ಕರಾವಳಿ–೧ (Operation: West Coast) ಎಂಬ ಮಂಗಳೂರಿನ ಈ ಕಚೇರಿಯು ಪ್ರತೀವರ್ಷ ಕೇಂದ್ರೀಯ ಭೂವೈಜ್ಞಾನಿಕ ಕಾರ್ಯಕ್ರಮ ಸಲಹಾ ಮಂಡಲಿಯ ಅನುಮೋದನೆಯೊಂದಿಗೆ ಪೂರ್ವನಿರ್ಧಾರಿತ ಕಾರ್ಯಕ್ರಮಗಳನ್ನು ಅರಬ್ಬೀಸಮುದ್ರದ ಭಾರತ ಸಾರ್ವಭೌಮ ಜಲವಲಯದಲ್ಲಿ (territorial water zone), ವ್ಯಾವರ್ತಕ ಆರ್ಥಿಕ ವಲಯ (Exclusive Economic Zone) ದಲ್ಲಿ ಅನುಷ್ಠಾನಗೊಳಿಸುತ್ತದೆ. ಆರ್.ವಿ.ಸಮುದ್ರ ಮಥನ ಎಂಬ ದೊಡ್ಡ ಹಡಗಿನಲ್ಲಿಯೂ, ಪಶ್ಚಿಮ ಕರಾವಳಿಯ ಸಮುದ್ರ ಅಧ್ಯಯನಕ್ಕೆಂದೇ ಇರುವ ಆರ್.ವಿ.ಸಮುದ್ರಶೋಧಿಕಾಮ ಎಂಬ ಚಿಕ್ಕ ಹಡಗಿನಲ್ಲಿಯೂ ಪೂರ್ವನಿರ್ಧಾರಿತ ಸಮುದ್ರ ಪರ್ಯಟನೆಗಳನ್ನು ಕೈಗೊಂಡು ತಳದಲ್ಲಿನ ಗಷ್ಟುಗಳ ಮತ್ತು ಖನಿಜಗಳ ಸಂಶೋಧನೆ, ಪರಿಶೋಧನೆ, ಅಧ್ಯಯನ, ರಾಸಾಯನಿಕ ವಿಶ್ಲೇಷಣೆ, ನಿರೂಪಣಾ ಪಟಗಳ ತಯ್ಯಾರಿ, ಸೂಕ್ಷ್ಮ ಜೈವಿಕ ಪಳೆಯುಳಿಕೆಗಳ ಪರೀಕ್ಷೆ, ಸಮುದ್ರತಳದ ಆಳದ ಮಟ್ಟ ಮತ್ತು ಅದರ ಕೆಳಗಿರುವ ಭೂಭೌತಿಕ ಪದರುಗಳ ವಿವೇಚನಾ ಪರ ವಿಶ್ಲೇಷಣೆ ಮುಂತಾದವುಗಳನ್ನು ತನ್ನ ಕಾರ್ಯಕ್ಷೇತ್ರದಲ್ಲಿ ನಡೆಸಿಕೊಡುವುದು ಮೊದಲಾದ ಚಟುವಟಿಕೆಗಳನ್ನು ಕೈಗೊಳ್ಳುತ್ತದೆ. ಉಪಮಹಾನಿರ್ದೇಶಕ ಹಾಗೂ ವಿಭಾಗೀಯ ಮುಖ್ಯಸ್ಥ, ಸಾಗರವಿಭಾಗ, ಭಾರತೀಯ ಭೂಗರ್ಭ ಸರ್ವೇಕ್ಷಣೆ, ಕೊಲ್ಕತ್ತಾ ಅವರು ಮೇಲಧಿಕಾರಿಯಾಗಿರುತ್ತಾರೆ.

## ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರ

ಮಂಗಳೂರಿನಲ್ಲಿ ೧೯೫೧ರಲ್ಲಿ ಪ್ರಾರಂಭವಾದ ಈ ಕಛೇರಿಯು ಕೇಂದ್ರ ಸರಕಾರದ ನಾಗರಿಕ ವಿಮಾನಯಾನ ಮಂತ್ರಾಲಯದ ಅಧೀನಕ್ಕೆ ಒಳಪಟ್ಟಿರುತ್ತದೆ. ಏರ್‌ಪೋರ್ಟ್ ಡೈರೆಕ್ಟರ್ ಈ ಕಛೇರಿಯ ಮುಖ್ಯಸ್ಥರಾಗಿದ್ದು, ಅಡಿಷನಲ್ ಜನರಲ್ ಮೇನೇಜರ್ (ಏರ್ ಟ್ರಾಫಿಕ್ ಕಂಟ್ರೋಲ್), ಡೆಪ್ಯುಟಿ ಜನರಲ್ ಮೇನೇಜರ್ (ಸಿಎನ್‌ಎಸ್) ಮೊದಲಾದ ವಿವಿಧ ಅಧಿಕಾರಿ, ಸಿಬ್ಬಂದಿಗಳು ಅವರೊಂದಿಗೆ ಕಾರ್ಯನಿರ್ವಹಿಸುತ್ತಿದ್ದಾರೆ. ವಿಶ್ವದರ್ಜೆಯ ವಿಮಾನನಿಲ್ದಾಣದ ಪ್ರತಿಯೊಂದಿಗೆ ಗ್ರಾಹಕರ ಸಂತೃಪ್ತಿಗೊಳಿಸಿ, ವಾಯುಯಾನ ಸೇವೆಗಳಿಂದ ಆರ್ಥಿಕಾಭಿವೃದ್ಧಿ ಸಾಧಿಸುವ ಮಹತ್ವದ ಧ್ಯೇಯವನ್ನಿರಿಸಿಕೊಂಡಿರುವ ಈ ಕಚೇರಿಯು ವಿಮಾನ ಸಂಚಾರ ಸೇವೆಗಳಿಗೆ ಸಂಬಂಧಿಸಿದಂತೆ ರನ್‌ವೇಗಳು, ಟರ್ಮಿನಲ್ ಕಟ್ಟಡ, ಅಗ್ನಿಶಾಮಕ ಸೇವೆಗಳ ನಿರ್ವಹಣೆ ಮಾಡುವುದು ಮತ್ತು ಪ್ರಯಾಣಿಕರ ಸೌಲಭ್ಯಗಳ ವ್ಯವಸ್ಥೆ ಮಾಡುವುದು ಮೊದಲಾದವುಗಳಿಗೆ ಸಂಬಂಧಿಸಿದ ಚಟುವಟಿಕೆಗಳನ್ನು ನಡೆಸುತ್ತಿದೆ. ಏರ್‌ಕ್ರಾಫ್ಟ್ ಆಕ್ಟ್ ೧೯೩೪ ಮತ್ತು ಎಎಐ ಆಕ್ಟ್ ೧೯೯೪ ಹಾಗೂ ಐಸಿಎಂಒದ ಪರಿಚ್ಛೇದಗಳಲ್ಲಿ ರೂಪಿಸಿರುವ ವಿವಿಧ ಕಾಯಿದೆ, ನಿಯಮಗಳನ್ನು ಈ ಕಚೇರಿಯು ತನ್ನ ಆಡಳಿತ ನಿರ್ವಹಣೆಯಲ್ಲಿ ಅನುಸರಿಸುತ್ತದೆ. ಪ್ರಾಂತೀಯ ಕಾರ್ಯನಿರ್ವಾಹಕ ನಿರ್ದೇಶಕ, ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರ, ಚೆನ್ನೈ ಅವರು ಮೇಲಧಿಕಾರಿಯಾಗಿರುತ್ತಾರೆ. ಇವಲ್ಲದೆ, ಜಿಲ್ಲೆಯಲ್ಲಿ ಸಹಕಾರ ಇಲಾಖೆ, ಔಷಧ ನಿಯಂತ್ರಣ ಇಲಾಖಾ ಕಚೇರಿಗಳು ಹಾಗೂ ಕಲೆ ಪ್ರಸರಕಾರದ ಗುಪ್ತಗಳ, ಸೀಮಾ ಸುಂಕ, ಕರಾವಳಿ ರಕ್ಷಣಾ ಪಡೆ, ಪಾಸ್‌ಪೋರ್ಟ್ ಕೇಂದ್ರಸಾಗರ ಮತ್ಸ್ಯ ಸಂಶೋಧನಾ ಸಂಸ್ಥೆ, ಕೇಂದ್ರ ಲೋಕೋಪಯೋಗಿ ಇಲಾಖೆ, ಕೇಂದ್ರ ಉಗ್ರಾಣ, ಸಾಗರೋತ್ಪನ್ನ ರಫ್ತು ಅಭಿವೃದ್ಧಿ ಪ್ರಾಧಿಕಾರ, ರಾಷ್ಟ್ರೀಯ ಮಾಹಿತಿಕೇಂದ್ರ ಮೊದಲಾದವುಗಳ ಕಚೇರಿಗಳೂ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿವೆ.

♦♦♦